# ಹಝ್ರತ್ ಮುಹಮ್ಮದ್ ಪೈಗಂಬರರು(ಸ)

# ಭಯೋತ್ಪಾದನೆಯನ್ನು ಎಂದೂ ಸಮರ್ಥಿಸಿರಲಿಲ್ಲ

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ, ಐದನೇ ಖ಼ಲೀಫ಼ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಲಂಡನಿನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ 2016ರಲ್ಲಿ ಜರಗಿದ ಹದಿಮೂರನೆಯ ಶಾಂತಿ ಸಂಕಿರಣದಲ್ಲಿ ನೀಡಿದ ಭಾಷಣ.



ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಯ್ಯದಹುಲ್ಲಾಹ್) ಹೇಳಿದರು:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್. (ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.)

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು. (ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.)

ನಮ್ಮ ಆಮಂತ್ರಣವನ್ನು ಸ್ವೀಕರಿಸಿ ನಮ್ಮೊಂದಿಗೆ ಈ ದಿನ ಸಂಜೆ ಸೇರಿದ ಎಲ್ಲ ಗಣ್ಯ ಅತಿಥಿಗಳಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಸಲ್ಲಿಸುತ್ತಿದ್ದೇನೆ. ಭಯೋತ್ಪಾದಕ ಗುಂಪುಗಳ ಹೇಯ ಮತ್ತು ಅಪಮಾನಕರ ಕುಕೃತ್ಯಗಳ ಕಾರಣದಿಂದ ಇಸ್ಲಾಮಿನ ಬಗ್ಗೆ ಭಯವು ವ್ಯಾಪಕವಾಗಿ ಹರಡಿರುವಂತಹ ಪರಿಸ್ಥಿತಿಯಲ್ಲಿ ನೀವು ಈ ಸಭೆಯಲ್ಲಿ ಹಾಜರಾಗಿರುವುದು ವಿಶಿಷ್ಟವಾಗಿ ಗಮನಾರ್ಹವಾಗಿದೆ.

ಉದಾಹರಣೆಗೆ, ಕಳೆದ ವರ್ಷ ನವೆಂಬರಿನಲ್ಲಿ ಪ್ಯಾರಿಸ್‌ನಲ್ಲಿ ಭಯೋತ್ಪಾದಕರು ನಡೆಸಿದ ಆಕ್ರಮಣವನ್ನು ಲೋಕವು ಗಾಬರಿಯಿಂದ ವೀಕ್ಷಿಸಿತು. ಇದಲ್ಲದೆ ಲೋಕದ ವಿವಿಧ ದೇಶಗಳಲ್ಲಿ ಆತ್ಮಹತ್ಯಾ ಬಾಂಬ್ ದಾಳಿಗಳೂ ಆಕ್ರಮಣಗಳೂ ವಿವಿಧ ಸಂದರ್ಭಗಳಲ್ಲಿ ನಡೆದುವು. ಯುನೈಟೆಡ್ ಕಿಂಗ್‌ಡಮ್ (ಯು.ಕೆ.) ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಅಸಿಸ್ಟೆಂಟ್ ಕಮಿಶನರ್ ಆಫ್ ಪೊಲೀಸ್, ದಾಯಿಶ್ (ISIS) ಬಗ್ಗೆ ಹೀಗೆ ಮುನ್ನೆಚ್ಚರಿಕೆ ನೀಡಿದ್ದಾರೆ: "ಅದು ಬೃಹತ್ತಾದ ಮತ್ತು ಘೋರ ಭಯೋತ್ಪಾದಕ ಆಕ್ರಮಣಗಳನ್ನು ಉನ್ನತ ಶ್ರೇಣಿಯ ಸಾರ್ವಜನಿಕ ಪ್ರದೇಶಗಳಲ್ಲಿ ನಡೆಸಬಹುದು."

ಇದಲ್ಲದೆ, ಕಳೆದ ವರ್ಷ ಯುರೋಪಿಗೆ ತೀವ್ರಗತಿಯಲ್ಲಿ ನಿರಾಶ್ರಿತರ ಒಳನುಗ್ಗುವಿಕೆ ಪ್ರಾರಂಭವಾಗಿದ್ದು ಇದರಿಂದ ಅನೇಕ ಜನರಲ್ಲಿ ಭಯ, ಅನಿಶ್ಚಿತತೆ,

**ಕಳೆದ ವರ್ಷ ಯುರೋಪಿಗೆ ತೀವ್ರಗತಿಯಲ್ಲಿ ನಿರಾಶ್ರಿತರ ಒಳನುಗ್ಗುವಿಕೆ ಪ್ರಾರಂಭವಾಗಿದ್ದು ಇದರಿಂದ ಅನೇಕ ಜನರಲ್ಲಿ ಭಯ, ಅನಿಶ್ಚಿತತೆ, ಆತಂಕ ತಲೆದೋರಿದೆ.**

ಆತಂಕ ತಲೆದೋರಿದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಮುಸ್ಲಿಮ್ ಸಮುದಾಯ ಏರ್ಪಡಿಸಿದ ಸಭೆಯಲ್ಲಿ ಮುಸ್ಲಿಮೇತರರಾದ ನೀವು ಸಂತೋಷದಿಂದ ಭಾಗವಹಿಸುವಾಗ ಅದು ನಿಮ್ಮ ಧೀರತೆ, ಸಹನೆ ಮತ್ತು ಹೃದಯ ವಿಶಾಲತೆಯನ್ನು ಸಾಬೀತುಗೊಳಿಸುತ್ತದೆ.

ಆದರೆ ವಾಸ್ತವವೇನೆಂದರೆ, ನೈಜ ಇಸ್ಲಾಮ್ ಧರ್ಮದ ಬಗ್ಗೆ ಯಾರೂ ಹೆದರಬೇಕಾಗಿಲ್ಲ. ಕೆಲವು ಜನರು ಇಸ್ಲಾಮ್ ಬಗ್ಗೆ, ಅದು ಉಗ್ರಗಾಮಿಗಳ ಧರ್ಮವೆಂದೂ ಅದು ಆತ್ಮಹತ್ಯಾ ಬಾಂಬ್ ದಾಳಿಯನ್ನು ಮತ್ತು ವಿವಿಧ ರೀತಿಯ ಭಯೋತ್ಪಾದಕ ಕೃತ್ಯಗಳನ್ನು ಪ್ರೋತ್ಸಾಹಿಸುತ್ತದೆ ಎಂದೂ ವಾದಿಸುತ್ತಾರಾದರೂ ಈ ವಾದವು ಸಂಪೂರ್ಣವಾಗಿಯೂ ಸುಳ್ಳಾಗಿದೆ. ಇತ್ತೀಚೆಗೆ ಒಬ್ಬ ಪ್ರಸಿದ್ಧ ಇಂಗ್ಲಿಷ್ ಅಂಕಣಗಾರ "ಇಸ್ಲಾಮೋಫೋಬಿಯ" (ಇಸ್ಲಾಮ್ ಬಗ್ಗೆ ಭಯ) ಎಂಬ ವಿಷಯದ ಬಗ್ಗೆ ಒಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಲೇಖನ ಬರೆದಿದ್ದರು. ಆ ಲೇಖಕ ಹೀಗೆ ಬರೆದಿದ್ದಾರೆ: ಆತ್ಮಹತ್ಯಾ ದಾಳಿಗಳ ಬಗ್ಗೆ ಬಹಳ ಸಂಶೋಧನೆ ನಡೆಸಿದ ನಂತರ ತಿಳಿದು ಬಂದುದೇನೆಂದರೆ, ಪ್ರಥಮ ಆತ್ಮಹತ್ಯಾ ದಾಳಿ ನಡೆದುದು 1980ರ ದಶಕದಲ್ಲಾಗಿದೆ. ಆದರೆ ಇಸ್ಲಾಮ್ ಕಳೆದ ಹದಿನಾಲ್ಕು ನೂರು ವರ್ಷಗಳಿಂದ ಅಸ್ತಿತ್ವದಲ್ಲಿದೆ.

ಆ ಲೇಖಕ ಹೀಗೆ ನಿಷ್ಕರ್ಷಿಸಿದರು: ಇಸ್ಲಾಮ್ ಧರ್ಮ ಆತ್ಮಹತ್ಯಾ ದಾಳಿಗಳನ್ನು ಪ್ರೋತ್ಸಾಹಿಸುವಂತಹ ಧರ್ಮವಾಗಿದ್ದರೆ ಅಂತಹ ಆಕ್ರಮಣಗಳು ಇಸ್ಲಾಮ್

**ಇತ್ತೀಚೆಗೆ ಒಬ್ಬ ಪ್ರಸಿದ್ಧ ಇಂಗ್ಲಿಷ್ ಅಂಕಣಗಾರ "ಇಸ್ಲಾಮೋಫೋಬಿಯ" (ಇಸ್ಲಾಮ್ ಬಗ್ಗೆ ಭಯ) ಎಂಬ ವಿಷಯದ ಬಗ್ಗೆ ಒಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಲೇಖನ ಬರೆದಿದ್ದರು. ಆ ಲೇಖಕ ಹೀಗೆ ಬರೆದಿದ್ದಾರೆ: ಆತ್ಮಹತ್ಯಾ ದಾಳಿಗಳ ಬಗ್ಗೆ ಬಹಳ ಸಂಶೋಧನೆ ನಡೆಸಿದ ನಂತರ ತಿಳಿದು ಬಂದುದೇನೆಂದರೆ, ಪ್ರಥಮ ಆತ್ಮಹತ್ಯಾ ದಾಳಿ ನಡೆದುದು 1980ರ ದಶಕದಲ್ಲಾಗಿದೆ. ಆದರೆ ಇಸ್ಲಾಮ್ ಕಳೆದ ಹದಿನಾಲ್ಕು ನೂರು ವರ್ಷಗಳಿಂದ ಅಸ್ತಿತ್ವದಲ್ಲಿದೆ.**

ಧರ್ಮದ ಆರಂಭ ಕಾಲದಿಂದಲೇ ಪ್ರಾರಂಭವಾಗಿ ಮುಂದೆ ಅದರ ಚರಿತ್ರೆಯುದ್ದಕ್ಕೂ ನಡೆದಿರಬೇಕಾಗಿತ್ತು. ಈ ಲೇಖಕನ ಅಭಿಪ್ರಾಯ ಸರಿಯಾದುದಾಗಿದೆ. ಈ ಆಕ್ರಮಣಗಳು ಆಧುನಿಕ ಕಾಲದ ದುಷ್ಕೃತ್ಯಗಳೆಂದೂ ಇಸ್ಲಾಮಿನ ಸತ್ಯವಾದ ಶಾಂತಿಯುತ ತತ್ವಗಳಿಂದ ದೂರಸರಿದವೆಂದೂ ಅವರು ಸಾಬೀತುಗೊಳಿಸಿದ್ದಾರೆ. ಇಸ್ಲಾಮ್ ಧರ್ಮ ನಿಶ್ಚಯವಾಗಿಯೂ ಎಲ್ಲ ರೀತಿಗಳ ಆತ್ಮಹತ್ಯೆಗಳನ್ನು ನಿಷಿದ್ಧಗೊಳಿಸಿದೆ. ಆದುದರಿಂದ ಆತ್ಮಹತ್ಯಾ ದಾಳಿ ಮತ್ತು ಬೇರೆ ಯಾವುದೇ ರೀತಿಯ ಭೀಕರ ಕೃತ್ಯವನ್ನು ಅದು ಸಮರ್ಥಿಸುವುದಿಲ್ಲ.

ಅಂತಹ ಹೇಯಕೃತ್ಯಗಳು ನಿಷ್ಕಳಂಕ ಮಹಿಳೆಯರ, ಮಕ್ಕಳ ಮತ್ತು ಇತರ ಜನರ ಕೊಲೆ ಮತ್ತು ಬರ್ಬರ ಸಾಮೂಹಿಕ ಹತ್ಯೆಯನ್ನುಂಟು ಮಾಡುತ್ತವೆ. ಅಮೇರಿಕದ ಟೆಕ್ಸಾಸ್‌ನ ಹೌಸ್ಟನ್‌ನಲ್ಲಿರುವ ರೈಸ್ ಯುನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ಕೊನ್‌ಸಿಡೈನ್ ಹೀಗೆ ಬರೆದಿದ್ದಾರೆ: ತಥಾಕಥಿತ ಇಸ್ಲಾಮಿಕ್ ಸ್ಟೇಟ್‌ನಲ್ಲಿ (ISIS) ಕ್ರೈಸ್ತರ ವಿರುದ್ಧ ನಡೆಸಲಾಗುವ ಹಿಂಸಾಚಾರವನ್ನು ಮುಹಮ್ಮದ್ ಪೈಗಂಬರರ(ಸ) ಉಪದೇಶಗಳ ಮೂಲಕ ಸಮರ್ಥಿಸಲು ಸಾಧ್ಯವಿಲ್ಲ. ಪೈಗಂಬರರು(ಸ) ದೂರದರ್ಶಿತ್ವದಿಂದ ನೋಡಿದ ಮುಸ್ಲಿಮ್ ರಾಷ್ಟ್ರ ಬಹುಧರ್ಮಾವಲಂಬಿಗಳಿಂದ ಕೂಡಿದುದೂ ನಾಗರಿಕ ಹಕ್ಕುಗಳನ್ನು ನೀಡುವುದೂ ಆಗಿತ್ತು.

ಆದ್ದರಿಂದ ಭೀಕರ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ ಎಂಬುದು ಸ್ಪಷ್ಟ. ಇಸ್ಲಾಮ್ ಯುದ್ಧ ಮಾಡಲು ಎಂದಾದರೂ ಅನುಮತಿ ನೀಡಿದ್ದರೆ ಅದು ಪ್ರತಿರೋಧಕ್ಕೆ ಮಾತ್ರವಾಗಿತ್ತು. ಯುದ್ಧವನ್ನು ಮುಸ್ಲಿಮರ ಮೇಲೆ ಹೇರಲ್ಪಟ್ಟಾಗ ಮಾತ್ರ ಈ ಅನುಮತಿ ನೀಡಲಾಗಿತ್ತು. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ.

ಧಾರ್ಮಿಕ ಯುದ್ಧದ ಬಗ್ಗೆ ಹೇಳುವುದಾದರೆ, ಅನ್ಯಾಯ ಮತ್ತು ದೌರ್ಜನ್ಯಕ್ಕೆ ಒಳಗಾದವರಿಗೆ ಸರ್ವಶಕ್ತನಾದ ಅಲ್ಲಾಹನ ಸಹಾಯ ಮತ್ತು ನೆರವು ಲಭಿಸುವುದು ಎಂದು ಇದೇ ವಚನದಲ್ಲಿ ಹೇಳಲಾಗಿದೆ. ಇಸ್ಲಾಮಿನ ಆರಂಭದ ಕಾಲದಲ್ಲಿ ನಡೆದ ಯುದ್ಧಗಳು ಯಥಾರ್ಥ ಧಾರ್ಮಿಕ ಯುದ್ಧಗಳಾಗಿದ್ದುವು. ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯವೆಂಬ ಮೂಲಭೂತ ತತ್ವವನ್ನು ಎತ್ತಿಹಿಡಿಯಲು ಆ ಯುದ್ಧಗಳನ್ನು ಮಾಡಲಾಗಿತ್ತು. ಈ ಉದ್ದೇಶದಿಂದ ಮಾಡಲಾದ ಯುದ್ಧಗಳಲ್ಲಿ ಅಲ್ಪಸಂಖ್ಯೆಯಲ್ಲಿದ್ದ ಮತ್ತು ಸಾಕಷ್ಟು ಶಸ್ತ್ರಾಸ್ತ್ರಗಳಿಲ್ಲದ ಮುಸ್ಲಿಮರು ಸುಸಜ್ಜಿತ ಶತ್ರು ಸೈನ್ಯಗಳ ವಿರುದ್ಧ ಹೋರಾಡಿ ಜಯಶಾಲಿಗಳಾದರು ಎಂದು ಚರಿತ್ರೆ ಸಾಬೀತುಗೊಳಿಸಿದೆ.




ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) 13ನೇ ವಾರ್ಷಿಕ ಶಾಂತಿ ಸಂಕಿರಣದಲ್ಲಿ ಸಭಿಕರನ್ನು ಸಂಬೋಧಿಸಿ ಮಾಡುತ್ತಿರುವ ಭಾಷಣ.

ಆದರೆ ಇಂದಿನ ಕಾಲದಲ್ಲಿ ಮುಸ್ಲಿಮರು ತೊಡಗಿಕೊಂಡಿರುವ ಯುದ್ಧಗಳ ಬಗ್ಗೆ ಒಬ್ಬ ಮುಸ್ಲಿಮನೆಂಬ ನೆಲೆಯಲ್ಲಿ ನಾನು ವಿಶ್ಲೇಷಿಸುವಾಗ ಅವುಗಳನ್ನು ಧಾರ್ಮಿಕ ಯುದ್ಧಗಳೆಂದು ಹೇಳಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಯಾಕೆಂದರೆ ಮುಸ್ಲಿಮ್ ಲೋಕದಲ್ಲಿ ಈಗ ನಡೆಯುತ್ತಿರುವ ಯುದ್ಧಗಳಲ್ಲಿ ಬಹುತೇಕ ಆಂತರಿಕ ಕ್ಷೋಭೆಗಳಾಗಿವೆ ಅಥವಾ ನೆರೆಹೊರೆಯ ಮುಸ್ಲಿಮ್ ದೇಶಗಳ ವಿರುದ್ಧವಾಗಿವೆ. ಯಾವುದಾದರೂ ಮುಸ್ಲಿಮೇತರ ದೇಶ ಈ ಯುದ್ಧಗಳಲ್ಲಿ ತೊಡಗಿಕೊಂಡಿದ್ದರೆ ಅದು ಆ ಯುದ್ಧಗಳನ್ನು ಧಾರ್ಮಿಕ ಯುದ್ಧವೆಂದು ಎಂದೂ ಘೋಷಿಸಿಲ್ಲ. ಅದು ಪರಸ್ಪರ ಹೋರಾಡುವ ಮುಸ್ಲಿಮರಿಗೆ ನೆರವು ನೀಡುತ್ತದಷ್ಟೆ. ಆದುದರಿಂದ ಇಂದಿನ ಕಾಲದಲ್ಲಿ ನಡೆಯುತ್ತಿರುವ ಯುದ್ಧಗಳು ಇಸ್ಲಾಮಿಗೋಸ್ಕರವಾಗಲಿ, ಧರ್ಮ ರಕ್ಷಣೆಗೋಸ್ಕರವಾಗಲಿ ನಡೆಯುತ್ತಿರುವ ಯುದ್ಧಗಳಲ್ಲ. ಅವು ಆರ್ಥಿಕ ಅಥವಾ ಭೌಗೋಳಿಕ ಲಾಭಕ್ಕೋಸ್ಕರ ಮಾಡಲಾಗುವ ಯುದ್ಧಗಳಾಗಿದ್ದು ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿಯನ್ನುಂಟು ಮಾಡುವವುಗಳಾಗಿವೆ.

ನಾನು ನಿಮ್ಮೊಂದಿಗೆ ಹೇಳಿದ ಪ್ರಕಾರ ಇಸ್ಲಾಮಿನ ಬಗ್ಗೆ ಭಯಪಡುವ ಆವಶ್ಯಕತೆಯಿಲ್ಲ ಎನ್ನುವುದು ನಿಮಗೆ ಸ್ಪಷ್ಟವಾಗಿರಬಹುದೆಂದು ನಾನು ಪ್ರತೀಕ್ಷಿಸುತ್ತೇನೆ. ಇಸ್ಲಾಮ್ ಉಗ್ರಗಾಮಿ ಧರ್ಮವಲ್ಲ ಅಥವಾ ಅದು ಆತ್ಮಹತ್ಯೆ ದಾಳಿಯನ್ನು ಅಥವಾ ಅಕ್ರಮ ಹಿಂಸಾಚಾರವನ್ನೂ ಅನುಮತಿಸುವುದಿಲ್ಲ. "ಇಸ್ಲಾಮೋಫೋಬಿಯ"ದ (ಇಸ್ಲಾಮ್ ಬಗ್ಗೆ ಭಯ) ಆವಶ್ಯಕತೆ ಇಲ್ಲ. ಯಾಕೆಂದರೆ ಇಸ್ಲಾಮ್ ಧರ್ಮದ ನೈಜ ತತ್ವಗಳು ಶಾಂತಿ, ಸಹನೆ ಮತ್ತು ಪರಸ್ಪರ ಗೌರವ ನೀಡುವಿಕೆಯನ್ನು ಪ್ರತಿಪಾದಿಸುತ್ತವೆ. ಇಸ್ಲಾಮೀ ತತ್ವಗಳು ಮಾನವೀಯ ಮೌಲ್ಯಗಳ ಬಗ್ಗೆ, ಗೌರವ

**ಸರ್ವಶಕ್ತನಾದ ಅಲ್ಲಾಹನು ಸರ್ವ ಜನರ ಪಾಲಕ ಪೋಷಕನೂ ಪರಮ ದಯಾವಂತನೂ ಕಾರುಣ್ಯನಿಧಿಯೂ ಆಗಿರುವಾಗ ತನ್ನನ್ನು ನಂಬುವವರು ತನ್ನ ಸೃಷ್ಟಿಗಳನ್ನು ನಿರ್ದಯತೆಯಿಂದ ಹತ್ಯೆ ಮಾಡಲು, ಅವರನ್ನು ತೀವ್ರವಾಗಿ ಆಕ್ರಮಣ ಮಾಡಲು ಮತ್ತು ಅವರಿಗೆ ಹಾನಿಯನ್ನುಂಟು ಮಾಡಲು ಹೇಗೆ ತಾನೆ ಇಚ್ಛಿಸಬಲ್ಲನು? ಅದು ಎಂದಿಗೂ ಸಾಧ್ಯವಿಲ್ಲ.**

ರಕ್ಷಣೆ ಬಗ್ಗೆ, ಘನತೆ ಮತ್ತು ಸ್ವಾತಂತ್ರ್ಯ ಎಲ್ಲ ಜನರಿಗೂ ಎಂಬುವುದರ ಬಗ್ಗೆ ಪ್ರತಿಪಾದಿಸುತ್ತವೆ.

ಆದರೆ ನಮಗೆ ತಿಳಿದಿರುವ ಹಾಗೆ, ಕೆಲವು ಉಗ್ರಗಾಮಿ ತಥಾಕಥಿತ ಇಸ್ಲಾಮೀ ಗುಂಪುಗಳಿವೆ. ಅವುಗಳು ಇಸ್ಲಾಮಿನ ಹೆಸರಲ್ಲಿ ಅತ್ಯಂತ ದುಷ್ಟಕೃತ್ಯಗಳನ್ನು ನಡೆಸುತ್ತಿವೆ. ಆದರೆ ನಾನು ಇದರ ಮೊದಲು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನ ಸ್ಪಷ್ಟಪಡಿಸುವುದೇನೆಂದರೆ, ಈ ಜನರ ಭಯೋತ್ಪಾದಕ ಕೃತ್ಯಗಳನ್ನು ಯಾವುದೇ ರೀತಿಯಲ್ಲಿಯೂ ಇಸ್ಲಾಮ್ ಸಮರ್ಥಿಸುವುದಿಲ್ಲ. ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದ ಎರಡನೆಯ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನನ್ನು "ಸಕಲ ಲೋಕಗಳ ಪಾಲಕ ಪೋಷಕ" ಎಂದು ಹೆಸರಿಸಲಾಗಿದೆ. ಪವಿತ್ರ ಖುರ್‌ಆನಿನ ಇದೇ ಅಧ್ಯಾಯದ ಮೂರನೆಯ ವಚನ ಸರ್ವಶಕ್ತನಾದ ಅಲ್ಲಾಹನು "ಪರಮ ದಯಾವಂತನೂ ಕಾರುಣ್ಯನಿಧಿಯೂ ಆಗಿರುವನು" ಎಂದು ಹೇಳುತ್ತದೆ. ಈ ವಚನಗಳು ಮುಸ್ಲಿಮನಾದ ನನ್ನನ್ನು ಯುದ್ಧ ಮತ್ತು ಹಿಂಸಾಚಾರಕ್ಕೆ ಒಯ್ಯುವುದಕ್ಕೆ ಬದಲಾಗಿ ಮಾನವರೆಲ್ಲರಿಗೂ ಪ್ರೀತಿಯನ್ನು ಪ್ರದರ್ಶಿಸಲು ಪ್ರೇರೇಪಿಸುವ ಮುಖ್ಯವಾದ ವಿಷಯವಾಗಿದೆ.

ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಸರ್ವ ಜನರ ಪಾಲಕ ಪೋಷಕನೂ ಪರಮ ದಯಾವಂತನೂ ಕಾರುಣ್ಯನಿಧಿಯೂ ಆಗಿರುವಾಗ ತನ್ನನ್ನು ನಂಬುವವರು ತನ್ನ ಸೃಷ್ಟಿಗಳನ್ನು ನಿರ್ದಯತೆಯಿಂದ ಹತ್ಯೆ ಮಾಡಲು, ಅವರನ್ನು ತೀವ್ರವಾಗಿ ಆಕ್ರಮಣ ಮಾಡಲು ಮತ್ತು ಅವರಿಗೆ ಹಾನಿಯನ್ನುಂಟು ಮಾಡಲು ಹೇಗೆ ತಾನೆ ಇಚ್ಛಿಸಬಲ್ಲನು? ಅದು ಎಂದಿಗೂ ಸಾಧ್ಯವಿಲ್ಲ. ಆದರೆ ಅಲ್ಲಾಹನು ಕ್ರೂರತೆಯನ್ನು ತಡೆಯಲು, ಅಮಾನವೀಯ ಕೃತ್ಯಗಳನ್ನು ಮತ್ತು ಅನ್ಯಾಯವನ್ನು ತಡೆಯಲು ಅನುಮತಿ ನೀಡಿರುತ್ತಾನೆ.

ಇಸ್ಲಾಮ್ ಉಪದೇಶಿಸುವುದೇನೆಂದರೆ, ಮುಸ್ಲಿಮನು ದೌರ್ಜನ್ಯಗಾರನನ್ನು ತಡೆಯಬೇಕು ಮತ್ತು ಎಲ್ಲ ರೀತಿಯ ಅನ್ಯಾಯ ಕೃತ್ಯಗಳನ್ನೂ ಅತಿರೇಕ ವರ್ತನೆಗಳನ್ನೂ ತಡೆಯಬೇಕು. ಇಸ್ಲಾಮ್ ಪ್ರಕಾರ ಎರಡು ವಿಧಾನಗಳಲ್ಲಿ ಇದನ್ನು ಸಾಧಿಸಬಹುದು. ಮೊದಲನೆಯದಾಗಿ ಚರ್ಚೆ, ಸಂಧಾನ ಮತ್ತು ಮುತ್ಸದ್ಧಿತನದ ಮೂಲಕ ಶಾಂತಿ ಸ್ಥಾಪಿತವಾಗುವುದಾದರೆ ಅದೇ ಉತ್ತಮ. ಆದರೆ ಹೀಗೆ ಮಾಡಲು ಸಾಧ್ಯವಾಗದಿದ್ದರೆ ಎರಡನೆಯ ಕ್ರಮವಾಗಿ, ದೌರ್ಜನ್ಯವನ್ನು ತಡೆಯಲು ಮತ್ತು ಸ್ಥಿರ ಶಾಂತಿ ಸ್ಥಾಪಿಸಲು ಬಲಪ್ರಯೋಗದ ಮಾರ್ಗವನ್ನು ಅವಲಂಬಿಸಬಹುದು.

ಧಾರ್ಮಿಕ ವಲಯದಿಂದ ಹೊರಗೆ ಪ್ರತಿಯೊಂದು ದೇಶ ಮತ್ತು ಸಮಾಜದಲ್ಲಿ ಕಾನೂನು ಕಾಯಿದೆಗಳು ಜಾರಿಯಲ್ಲಿರುತ್ತವೆ. ಅವುಗಳನ್ನು ಉಲ್ಲಂಘಿಸಿದರೆ ಸಾಮಾನ್ಯವಾಗಿ ಶಿಕ್ಷೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಕಠಿಣ ಶಿಕ್ಷೆ ನೀಡದೆ ಮೃದುವಾಗಿ ದಂಡಿಸುವ ಮೂಲಕ ಅಥವಾ ವಾಗ್ದಂಡನೆ ಮೂಲಕ ಸುಧಾರಣೆ ಸಾಧ್ಯವಾಗುವುದಾದರೆ ಅದು ಉತ್ತಮವೇ ಆಗಿದೆ. ಆದರೆ ಅದು ಸಾಧ್ಯವಾಗುವುದಿಲ್ಲವಾದರೆ



ಸಿಂಪೋಸಿಯಮ್‌ನಲ್ಲಿ ಭಾಗವಹಿಸಿದ ಗೆಸ್ಟ್ ಸ್ಪೀಕರ್ಸ್, (ಎಡದಿಂದ ಬಲಕ್ಕೆ): ಝ್ಯಾಕ್ ಗೋಲ್ಡ್‌ಸ್ಮಿತ್ (ಲಂಡನಿನ ಮೇಯರ್ ಅಭ್ಯರ್ಥಿ ಮತ್ತು ರಿಚ್‌ಮೋಂಡ್ ಪಾರ್ಕಿನ ಪಾರ್ಲಿಮೆಂಟ್ ಸದಸ್ಯ), ಲಾರ್ಡ್ ತಾರಿಖ್ ಅಹ್ಮದ್ ಆಫ್ ವಿಂಬಲ್ಡನ್ (ಮಿನಿಸ್ಟರ್ ಫಾರ್ ಕೌಂಟರಿಂಗ್ ಎಕ್ಸ್ಟ್ರೀಮಿಝ್ಮ್), ರಫೀಕ್ ಹಯಾತ್ (ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿ ಯು.ಕೆ.ಯ ನ್ಯಾಶನಲ್ ಪ್ರೆಸಿಡೆಂಟ್), ಸಿಯೋಭನ್ ಮ್ಯಾಕ್‌ಡೋನಾಫ್ (ಮಿಚ್ಚಮ್ ಮತ್ತು ಮೋರ್ಡನಿನ ಪಾರ್ಲಿಮೆಂಟ್ ಸದಸ್ಯೆ ಹಾಗೂ ಆಲ್ ಪಾರ್ಟಿ ಪಾರ್ಲಿಮೆಂಟರಿ ಗ್ರೂಪ್ ಫಾರ್ ದ ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿಯ ಸಭಾಧ್ಯಕ್ಷೆ), ರೈಟ್ ಹಾನರೇಬಲ್ ಜಸ್ಟಿನ್ ಗ್ರೀನಿಂಗ್ (ಪಟ್ನಿಯ ಪಾರ್ಲಿಮೆಂಟ್ ಅಧ್ಯಕ್ಷೆ ಹಾಗೂ ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್)

ಸಮಾಜದ ಹಿತಕ್ಕೋಸ್ಕರ ಮತ್ತು ಅನ್ಯರಿಂದ ನ್ಯಾಯೋಲ್ಲಂಘನೆಯನ್ನು ತಡೆಯಲಿಕ್ಕೋಸ್ಕರ ಕಠಿಣ ಶಿಕ್ಷೆ ನೀಡಬೇಕಾಗುತ್ತದೆ.

ಧರ್ಮದ ವಲಯಕ್ಕೆ ಮರಳಿ ಇಸ್ಲಾಮ್ ಧರ್ಮ ತತ್ವಗಳನ್ನು ಪರಿಶೀಲಿಸುವುದಾದರೆ, ಇಸ್ಲಾಮಿನ ಪ್ರಕಾರ ಶಿಕ್ಷೆ ಅಥವಾ ನಿರ್ಬಂಧ ಹೇರುವಿಕೆ ಪ್ರತೀಕಾರ ರೂಪದಲ್ಲಿ ಆಗಿರಬಾರದು. ಅದರ ಉದ್ದೇಶ ಹಿಂಸೆ ಅಥವಾ ದೌರ್ಜನ್ಯ ನಿವಾರಣೆ ಮತ್ತು ಗುಣಾತ್ಮಕ ಸುಧಾರಣೆಯನ್ನು ಉಂಟುಮಾಡುವುದು ಆಗಿರಬೇಕು. ಒಬ್ಬ ವ್ಯಕ್ತಿಯನ್ನು ಅಥವಾ ಗುಂಪನ್ನು ಕ್ಷಮಿಸುವ ಮೂಲಕ ಮತ್ತು ದಯೆದೋರುವ ಮೂಲಕ ಸುಧಾರಣೆ ಮಾಡಬಹುದಾಗಿದ್ದರೆ ಈ ವಿಧಾನವನ್ನು ಅವಲಂಬಿಸಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ.

ಆದರೆ ಕ್ಷಮೆ ಮತ್ತು ಸಹನೆದೋರುವಿಕೆ ಪ್ರಯೋಜನ ಕರವಾಗುವುದಿಲ್ಲವಾದರೆ ಸುಧಾರಣೆಯ ಮಾರ್ಗವಾಗಿ ಶಿಕ್ಷೆಯನ್ನು ನೀಡಬೇಕು. ಆದುದರಿಂದ ಶಿಕ್ಷೆಯ ಬಗ್ಗೆ ಇಸ್ಲಾಮೀ ಸಿದ್ಧಾಂತ ದೂರದರ್ಶಿತ್ವ ಉಳ್ಳದ್ದೂ ಅಪ್ರತಿಮೇಯವೂ ಆಗಿದೆ. ಅದರ ಉದ್ದೇಶ ಸುಧಾರಣೆ ಮತ್ತು ಅಭಿವೃದ್ಧಿಯಾಗಿದೆ. ಮನುಷ್ಯರಲ್ಲಿ ಶ್ರೇಷ್ಠ ಮಟ್ಟದ ಮಾನವೀಯ ಮೌಲ್ಯಗಳನ್ನು ಬೆಳೆಸಿ ಸೃಷ್ಟಿಕರ್ತನಾದ ದೇವನ ಗುಣಗಳನ್ನು ಹೊಂದಿ ಎಲ್ಲರೂ ಪರಸ್ಪರ ಗೌರವ ಮತ್ತು ಕಾಳಜಿ ವಹಿಸುವಂತಾಗಲು ಇಸ್ಲಾಮ್ ಉದ್ದೇಶಿಸುತ್ತದೆ.

ಆದುದರಿಂದ ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ಹಕ್ಕುಗಳನ್ನು ಅನ್ಯಾಯವಾಗಿ ಕಿತ್ತುಕೊಂಡರೆ, ಮಾಡಿದ ಅಪರಾಧಕ್ಕೆ ಅನುಯೋಜ್ಯವಾದ ಶಿಕ್ಷೆಯನ್ನು ಇಸ್ಲಾಮ್ ಧರ್ಮ ಅನುಮತಿಸುತ್ತದೆ. ಆದರೆ ಶಿಕ್ಷಿಸದೆ ಸುಧಾರಣೆ ಮಾಡುವುದು ಸಾಧ್ಯವಿದ್ದರೆ ಅದಕ್ಕೆ ಆದ್ಯತೆ ನೀಡುತ್ತದೆ. "ಅವರು ಕ್ಷಮಿಸಲಿ ಮತ್ತು ಸೈರಿಸಿಕೊಳ್ಳಲಿ" ಎಂದು ಪವಿತ್ರ ಖುರ್‌ಆನಿನ ಅಧ್ಯಾಯ 24, ವಚನ 23ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿರುವುದು ಇದೇ ಕಾರಣದಿಂದಾಗಿದೆ.

ಇದೇ ರೀತಿ, ಕೋಪವನ್ನು ನಿಯಂತ್ರಿಸುವ ಮತ್ತು ಜನರಿಗೆ ಕ್ಷಮೆ ನೀಡುವ ಸಜ್ಜನರನ್ನು ಅಲ್ಲಾಹನು ಪ್ರೀತಿಸುತ್ತಾನೆ ಎಂದು ಪವಿತ್ರ ಖುರ್‌ಆನಿನ ಅಧ್ಯಾಯ 3 ವಚನ 135ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿರುವನು. ಪವಿತ್ರ ಖುರ್‌ಆನಿನಲ್ಲಿ ಬೇರೆ ಅನೇಕ ಕಡೆಗಳಲ್ಲಿ ಮನುಷ್ಯನು ತನಗೆ ಸಾಧ್ಯವಿರುವಲ್ಲೆಲ್ಲ ಕ್ಷಮಿಸಬೇಕೆಂದು ಉಪದೇಶಿಸಲಾಗಿದೆ. ಯಾಕೆಂದರೆ ಅಂತಿಮ ಗುರಿ ನೈತಿಕ ಸುಧಾರಣೆಯೇ ಹೊರತು ಪ್ರತೀಕಾರವಲ್ಲ. ದೇಶಗಳ ಮತ್ತು ಗುಂಪುಗಳ ಮಧ್ಯೆ ಸಂಘರ್ಷದ ಸಂದರ್ಭದಲ್ಲಿ ಸ್ಥಿರವಾದ ಶಾಂತಿ ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ಸುವರ್ಣ

**ಲೋಕದಲ್ಲಿ ಎಲ್ಲ ಜನರು ಶಾಂತಿಯಿಂದ ಮತ್ತು ಎಲ್ಲ ವಿಧಗಳ ದೌರ್ಜನ್ಯ ಮತ್ತು ಅನ್ಯಾಯದಿಂದ ಮುಕ್ತರಾಗಿ ಜೀವಿಸಬೇಕೆಂದು ಸರ್ವಲೋಕಗಳ ಪರಿಪಾಲಕನಾದ ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುತ್ತಾನೆ. ಇಸ್ಲಾಂ ಧರ್ಮ ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ಮನಸ್ಸಾಕ್ಷಿಯ ಸ್ವಾತಂತ್ರವನ್ನು ಪ್ರತಿಪಾದಿಸುತ್ತದೆ.**

ತತ್ವವನ್ನು ಪವಿತ್ರ ಖುರ್‌ಆನಿನ ಅಧ್ಯಾಯ 49 ವಚನ 10ರಲ್ಲಿ ವಿವರಿಸಿರುವನು.

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹೀಗೆ ಹೇಳಲಾಗಿದೆ, ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ ಮೂರನೆಯ ಒಂದು ಗುಂಪು ಅವರ ಮಧ್ಯೆ ಸಂಧಾನ ನಡೆಸಬೇಕು ಮತ್ತು ಶಾಂತಿಯುತವಾಗಿ ಸಂಘರ್ಷ ಕೊನೆಗೊಳ್ಳಲು ಪ್ರಯತ್ನಿಸಬೇಕು. ಒಪ್ಪಂದ ಮಾಡಿಕೊಂಡು ಎಲ್ಲ ಪಕ್ಷಗಳು ನ್ಯಾಯ ಪಾಲಿಸಬೇಕು. ಆದರೆ ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣ ಮಾಡಿ ಒಪ್ಪಂದವನ್ನು ಮುರಿದರೆ ಇತರ ದೇಶಗಳು ಅಥವಾ ಗುಂಪುಗಳು ಒಗ್ಗೂಡಿ ಆವಶ್ಯವಾದರೆ ಬಲಪ್ರಯೋಗ ನಡೆಸಬೇಕು. ಆದರೆ ಆಕ್ರಮಣಕಾರರ ಗುಂಪು ಹಿಂದೆ ಸರಿದರೆ ಮತ್ತು ಶಾಂತಿಯನ್ನು ಬಯಸಿದರೆ ಅವರೊಂದಿಗೆ ನ್ಯಾಯೋಚಿತವಾಗಿ ವರ್ತಿಸಬೇಕು. ಅವರ ಮೇಲೆ ಅನ್ಯಾಯದಿಂದ ನಿರ್ಬಂಧ ಹೇರಬಾರದು. ಅವರನ್ನು ಸ್ವತಂತ್ರ ದೇಶವಾಗಿ ಮುಂದುವರಿಯಲು ಬಿಡಬೇಕು.

ಆದುದರಿಂದ ಲೋಕದಲ್ಲಿ ಎಲ್ಲ ಜನರು ಶಾಂತಿಯಿಂದ ಮತ್ತು ಎಲ್ಲ ವಿಧಗಳ ದೌರ್ಜನ್ಯ ಮತ್ತು ಅನ್ಯಾಯದಿಂದ ಮುಕ್ತರಾಗಿ ಜೀವಿಸಬೇಕೆಂದು ಸರ್ವಲೋಕಗಳ ಪರಿಪಾಲಕನಾದ ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುತ್ತಾನೆ. ಇಸ್ಲಾಂ ಧರ್ಮ ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ಮನಸ್ಸಾಕ್ಷಿಯ ಸ್ವಾತಂತ್ರವನ್ನು ಪ್ರತಿಪಾದಿಸುತ್ತದೆ. ಇಸ್ಲಾಮ್ ಧರ್ಮದ ಪ್ರಕಾರ, ತನಗಿಷ್ಟವಿರುವ ಧಾರ್ಮಿಕ ನಂಬಿಕೆ ಹೊಂದಲು ಮತ್ತು ಆ ನಂಬಿಕೆಗಳನ್ನು ಪ್ರಚಾರ ಮಾಡಲು ಪ್ರತಿಯೊಬ್ಬ ಮನುಷ್ಯನಿಗೆ ಹಕ್ಕಿದೆ.

ನಂಬಿಕೆ ಎನ್ನುವುದು ಇಂದೂ ಮತ್ತು ಎಂದೆಂದಿಗೂ ಹೃದಯಕ್ಕೆ ಸಂಬಂಧಿಸಿದುದಾಗಿದೆ. ಯಾವುದೇ ರೀತಿಯ ಬಲಾತ್ಕಾರ ಧರ್ಮದಲ್ಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಇಸ್ಲಾಮ್ ಧರ್ಮ ಪರಿಪೂರ್ಣ ತತ್ವಗಳನ್ನೊಳಗೊಂಡಿದೆ ಎಂದು ಹೇಳಿರುವನಾದರೂ ಮತಾಂತರ ಮಾಡಲಿಕ್ಕಾಗಿ ಬಲಪ್ರಯೋಗಿಸಲು ಯಾರಿಗೂ ಅಧಿಕಾರವಿಲ್ಲ ಎಂದು ಸಹ ಹೇಳಿದ್ದಾನೆ. ಪ್ರತಿಯೊಬ್ಬನು ಯಾವುದೇ ಧರ್ಮದ ಅನುಯಾಯಿಯಾಗಿದ್ದರೂ ಆಗಿಲ್ಲವಾದರೂ ಇಸ್ಲಾಮ್ ಧರ್ಮವನ್ನು ಸೇರಲು ಸ್ವತಂತ್ರನಾಗಿದ್ದಾನೆ. ಆದರೆ ಮುಖ್ಯ ಅಂಶವೇನೆಂದರೆ ಧರ್ಮ ಸ್ವೀಕಾರ ಸ್ವತಂತ್ರವಾಗಿ ತನ್ನ ಸ್ವಂತ ಇಷ್ಟದ ಪ್ರಕಾರವಾಗಿರಬೇಕು. ಇದೇ ರೀತಿ ಒಬ್ಬ ಮುಸ್ಲಿಮ್ ಇಸ್ಲಾಮ್ ಧರ್ಮ ತ್ಯಜಿಸಲು ಬಯಸಿದರೆ, ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಅವನಿಗೆ ಅಥವಾ ಅವಳಿಗೆ ಹಾಗೆ ಮಾಡುವ ಅಧಿಕಾರವಿದೆ.

ಇಸ್ಲಾಮ್ ಧರ್ಮ ಸಾರ್ವಲೌಕಿಕ ಧರ್ಮವೆಂದೂ ಅದು ಕಾಲಾತೀತ ತತ್ವಗಳನ್ನು ಒಳಗೊಂಡಿದೆ ಎಂದೂ ನಾವು ನಂಬುತ್ತಿರುವೆವು. ಆದರೆ ಒಬ್ಬನು ಅದನ್ನು ಬಿಟ್ಟು ಹೋಗಲು ಇಚ್ಛಿಸುವವನಾದರೆ ಅದು ಅವನ ಆಯ್ಕೆ ಮತ್ತು ಅಧಿಕಾರಕ್ಕೆ ಸೇರಿದುದಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 55ರಲ್ಲಿ ಅಲ್ಲಾಹನು,




ಶಾಂತಿ ಸಂಕಿರಣದಲ್ಲಿ ಭಾಗವಹಿಸಿದ ಅತಿಥಿಗಳು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರ ಭಾಷಣವನ್ನು ಆಲಿಸುತ್ತಿರುವುದು.

ಯಾರಾದರೂ ಧರ್ಮವನ್ನು ತೊರೆದು ಹೋಗಲು ಬಯಸುವನಾದರೆ ಹೋಗಲಿ ಎಂದೂ ಅಂತಹ ಜನರಿಗೆ ಪ್ರತಿಯಾಗಿ ಅಲ್ಲಾಹನು ನಿಷ್ಠಾವಂತರಾದ ಜನರನ್ನು ತರುವನು ಎಂದೂ ಹೇಳಿದ್ದಾನೆ. ಯಾವುದೇ ಸರಕಾರ, ಗುಂಪು ಅಥವಾ ವ್ಯಕ್ತಿಗೆ ಧರ್ಮ ತ್ಯಜಿಸಿದವರನ್ನು ಶಿಕ್ಷಿಸಲು ಅಥವಾ ದಂಡಿಸಲು ಅಧಿಕಾರವಿರುವುದಿಲ್ಲ. ಆದುದರಿಂದ ಇಸ್ಲಾಮ್ ಧರ್ಮವು, ಧರ್ಮವನ್ನು ತ್ಯಜಿಸುವವರಿಗೆ ಶಿಕ್ಷೆಯನ್ನು ವಿಧಿಸುತ್ತದೆ ಎಂದು ಆಪಾದಿಸುವುದು ಸಂಪೂರ್ಣವಾಗಿ ಅನ್ಯಾಯಕರವೂ ಆಧಾರ ರಹಿತವೂ ಆಗಿದೆ. ಇಸ್ಲಾಮ್ ಧರ್ಮದ ಅಧ್ಯಾಪನೆಗಳು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನೆಂಬ ತತ್ವದ ಸುತ್ತಲೂ ತಿರುಗುತ್ತಿದೆ. ಇದರ ಫಲಸ್ವರೂಪವಾಗಿ, ಒಬ್ಬ ಮುಸ್ಲಿಮನು ನಿರ್ದಯತೆಯಿಂದ ತುಂಬಿದ ದೌರ್ಜನ್ಯ ಮಾಡಲು ಬಯಸುವಾಗ ಅಥವಾ ಯಾವುದೇ ರೀತಿಯ ಉಗ್ರಗಾಮಿ ಕೃತ್ಯ ನಡೆಸುವಾಗ ಅಂತಹ ವ್ಯಕ್ತಿ ಅಲ್ಲಾಹನ ಸರ್ವಲೋಕ ಪರಿಪಾಲಕನೆಂಬ ಗುಣವನ್ನು ನಿರಾಕರಿಸುತ್ತಾನೆ.

ಹಲವು ಮುಸ್ಲಿಮರು ಅಲ್ಲಾಹನನ್ನು ವಿಶ್ವದ ಒಡೆಯನೆಂದೂ ಸರ್ವಲೋಕಗಳ ಪಾರಿಪಾಲಕನೆಂದೂ ನಂಬುತ್ತಾರಾದರೂ ಅವರು ಅದರ ಅರ್ಥವನ್ನು ಮನವರಿಕೆ ಮಾಡಿಕೊಳ್ಳದೆ ಇಸ್ಲಾಮಿನ ಮೂಲ ಬೋಧನೆಗಳಿಂದ ದೂರಸರಿದು ಹೋಗಿದ್ದಾರೆ. ಆದುದರಿಂದ ಮಾನವರೆಲ್ಲರಿಗೆ ನೈಜ ಇಸ್ಲಾಮನ್ನು ವಿವರಿಸಿಕೊಡಲು ಸರ್ವಶಕ್ತನಾದ ಅಲ್ಲಾಹನು

**ನೈಜ ಮುಸ್ಲಿಮನು, ಒಬ್ಬ ತಾಯಿ ತನ್ನ ಮಗುವನ್ನು ಪ್ರೀತಿಸುವಂತೆ ಇತರರನ್ನು ಅವರ ಧಾರ್ಮಿಕ ಹಿನ್ನೆಲೆಯನ್ನು ಪರಿಗಣಿಸದೆ ಪ್ರೀತಿಸಬೇಕು. ತಾಯಿ ತನ್ನ ಮಗುವಿನೊಂದಿಗೆ ಹೊಂದುವ ಪ್ರೀತಿ ಉನ್ನತವೂ ಪರಿಶುದ್ಧವೂ ಆಗಿರುವ ಪ್ರೀತಿಯಾಗಿದೆ.**

ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ವಾಗ್ದತ್ತ ಮಸೀಹರನ್ನಾಗಿಯೂ ಈ ಕಾಲಘಟ್ಟದ ಸುಧಾರಕರನ್ನಾಗಿಯೂ ನಿಯೋಜಿಸಿ ಕಳುಹಿಸಿದನೆಂದು ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ.

ಧಾರ್ಮಿಕ ಯುದ್ಧಗಳ ಕಾಲಘಟ್ಟ ದಾಟಿಹೋಗಿದೆ. ಮಾನವರು ಶಾಂತಿಯುತವಾಗಿ ಜೀವಿಸಿ ತಮ್ಮ ಸೃಷ್ಟಿಕರ್ತನ ಹಕ್ಕುಗಳನ್ನೂ ಒಬ್ಬರಿನ್ನೊಬ್ಬರ ಹಕ್ಕುಗಳನ್ನೂ ಈಡೇರಿಸಿ ಕೊಡಬೇಕೆಂದು ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುತ್ತಾನೆಂದು ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದರು. ತನ್ನ ಅನುಯಾಯಿಗಳನ್ನು ಸಂಬೋಧಿಸಿ ವಾಗ್ದತ್ತ ಮಸೀಹರಾದ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಹೇಳಿದರು:

"ಇಸ್ಲಾಮ್ ಧರ್ಮದ ನೈಜ ತತ್ವಗಳ ಪ್ರಕಾರ ಧರ್ಮ ಎರಡು ಭಾಗಗಳನ್ನು ಹೊಂದಿದೆ ಅಥವಾ ಧರ್ಮ ಎರಡು ಮುಖ್ಯ ಉದ್ದೇಶಲಕ್ಷ್ಯಗಳ ಅಸ್ತಿಭಾರದ ಮೇಲಿದೆ ಎಂದು ಹೇಳಬಹುದು. ಮೊದಲನೆಯ ಭಾಗ, ಏಕದೇವನ ಅಸ್ತಿತ್ವದ ಬಗ್ಗೆ ಪರಿಪೂರ್ಣ ವಿಶ್ವಾಸವನ್ನು ಹೊಂದಿ, ಅವನನ್ನು ಪ್ರೀತಿಸಬೇಕಾದ ಮತ್ತು ಅನುಸರಿಸಬೇಕಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಪ್ರೀತಿಸಬೇಕು ಮತ್ತು ಅವನ ಅನುಸರಣೆಯಲ್ಲಿ ತಲ್ಲೀನನಾಗಬೇಕು. ಧರ್ಮದ ಎರಡನೆಯ ಭಾಗ, ದೇವನ ಸೃಷ್ಟಿಗಳ ಸೇವೆ ಮಾಡುವುದು, ತಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಪ್ರೀತಿಯಿಂದ ಸಮಾಜಸೇವೆ ಮಾಡಲು ಬಳಸುವುದು, ನಿಮ್ಮ ಮೇಲೆ ದಯೆದೋರಿದವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಅವರ ಮೇಲೆ ಮರಳಿ ದಯೆದೋರುವುದು. ಹಾಗೆ ನಿಮಗೆ ಉಪಕಾರ ಮಾಡಿದವರು ದೊರೆಗಳಾಗಲಿ, ಅಥವಾ ಸಾಮಾನ್ಯ ವ್ಯಕ್ತಿಗಳಾದರೂ ನೀವು ಹಾಗೆ ಮಾಡಬೇಕು. ನೀವು ಯಾವಾಗಲೂ ಅವರೊಂದಿಗೆ ಪ್ರೀತಿಯ ಸಂಬಂಧ ಇಟ್ಟುಕೊಳ್ಳಬೇಕು."

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಪವಿತ್ರ ಖುರ್‌ಆನಿನ ಅಧ್ಯಾಯ 16 ವಚನ 91ನ್ನು ಉಲ್ಲೇಖಿಸಿ ಅದರ ಯಥಾರ್ಥ ವ್ಯಾಖ್ಯಾನ ನೀಡಿದರು. ಆ ವಚನ ಹೀಗಿದೆ: "ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಇತರರಿಗೂ) ಸಹಾಯಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ."

ಅವರು ಪವಿತ್ರ ಖುರ್‌ಆನಿನ ಈ ವಚನವನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳಿದರು: ಮುಸ್ಲಿಮರು ಇತರ ಎಲ್ಲ ಜನರೊಂದಿಗೆ ನ್ಯಾಯನಿಷ್ಠರಾಗಿ ಮತ್ತು ಉತ್ತಮವಾಗಿ ವರ್ತಿಸಬೇಕೆಂದು ಅಲ್ಲಾಹನು ಈ ವಚನದಲ್ಲಿ ಆಜ್ಞಾಪಿಸಿದ್ದಾನೆ. ಆದ್ದರಿಂದ ಸಹಾನುಭೂತಿಯಿಂದ ವರ್ತಿಸುವವರೊಂದಿಗೂ ಯಾವುದೇ ರೀತಿ ಉಪಕಾರಮಾಡದವರೊಂದಿಗೂ ಹೀಗೆಯೇ ವರ್ತಿಸಬೇಕು. ಲೋಕದಲ್ಲಿರುವ ಪ್ರತಿಯೊಬ್ಬ ಮನುಷ್ಯನು ತನ್ನ ಕುಟುಂಬದ ನಿಕಟ ಸಂಬಂಧಿಯೆಂದು ಗಣಿಸಿ ಮುಸ್ಲಿಮನು ಅಲ್ಲಾಹನ ಸೃಷ್ಟಿಗಳನ್ನು ಪ್ರೀತಿಸಬೇಕೆಂದು ವಾಗ್ದತ್ತ ಮಸೀಹರು ಉಪದೇಶಿಸಿದರು.

ಅವರು ಹೀಗೆ ಸಹ ಹೇಳಿದರು: ನೈಜ ಮುಸ್ಲಿಮನು, ಒಬ್ಬ ತಾಯಿ ತನ್ನ ಮಗುವನ್ನು ಪ್ರೀತಿಸುವಂತೆ ಇತರರನ್ನು ಅವರ ಧಾರ್ಮಿಕ ಹಿನ್ನೆಲೆಯನ್ನು

ಪರಿಗಣಿಸದೆ ಪ್ರೀತಿಸಬೇಕು. ತಾಯಿ ತನ್ನ ಮಗುವಿನೊಂದಿಗೆ ಹೊಂದುವ ಪ್ರೀತಿ ಉನ್ನತವೂ ಪರಿಶುದ್ಧವೂ ಆಗಿರುವ ಪ್ರೀತಿಯಾಗಿದೆ. ಆದರೆ ಒಬ್ಬನು ದಯೆಯನ್ನೂ ಸಹಾನುಭೂತಿಯನ್ನೂ ಪ್ರದರ್ಶಿಸುವಾಗ ಅವನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆತ್ಮ ಪ್ರಶಂಸೆಯ ಅಂಶವಿರಬಹುದು ಮತ್ತು ಕೆಲವೊಮ್ಮೆ ತಾನು ಮಾಡಿದ ಉಪಕಾರದ ಬಗ್ಗೆ ನೆನಪಿಸಿಕೊಟ್ಟು ಪ್ರಯೋಜನ ಪಡೆಯಲು ಪ್ರಯತ್ನ ಮಾಡುವುದು ಸಹ ಸಾಧ್ಯವಿದೆ.

ಆದರೆ ತಾಯಿಯ ಪ್ರೀತಿ ಸ್ವಾರ್ಥರಹಿತವಾಗಿದ್ದು ಪರಹಿತ ಚಿಂತನೆಯಿಂದ ಭರಿತವಾಗಿರುತ್ತದೆ. ತಾಯಿ ತನ್ನ ಮಗುವಿನ ಹಿತಕ್ಕೋಸ್ಕರ ಎಲ್ಲವನ್ನೂ ಬಲಿಗೊಡಲು ಸಿದ್ಧಳಾಗುತ್ತಾಳೆ. ಆಕೆ ತನ್ನ ಸೇವೆಗೆ ಪ್ರತಿಯಾಗಿ ಏನನ್ನೂ ಬಯಸುವುದಿಲ್ಲ. ಆಕೆ ತನ್ನ ಕೆಲಸದ ಬಗ್ಗೆ ಪ್ರಶಂಸೆಯನ್ನೂ ಇಚ್ಛಿಸುವುದಿಲ್ಲ. ತಾಯಿ ಮಗುವನ್ನು ಪ್ರೀತಿಸುವಂತೆ ಮುಸ್ಲಿಮರು ಮಾನವರನ್ನು ಪ್ರೀತಿಸಬೇಕೆಂದು ಇಸ್ಲಾಮ್ ಕಲಿಸುತ್ತದೆ. ಇವು ಇಸ್ಲಾಮಿನ ನೈಜ ತತ್ವಗಳಾಗಿವೆ.

ಸರ್ವಶಕ್ತನಾದ ಅಲ್ಲಾಹನು, ತನ್ನನ್ನು ನಂಬುವವರು ತನ್ನ ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದ್ದಾನೆ. ಆದುದರಿಂದ ಒಬ್ಬ ನೈಜ ಮುಸ್ಲಿಮನಿಗೆ ಕ್ರೂರಿಯಾಗಲು ಸಾಧ್ಯವಲ್ಲ. ಅದೇ ರೀತಿ ಯಾವುದೇ ರೀತಿಯ ಅನ್ಯಾಯ, ಹಿಂಸಾಚಾರ ಮತ್ತು ಉಗ್ರಗಾಮಿ ಚಟುವಟಿಕೆಗಳನ್ನು ಅನುಮತಿಸುವುದು ಇಸ್ಲಾಮಿಗೆ ಸಾಧ್ಯವಿಲ್ಲ. ನಾನು ಹಿಂದಿನ ಅನೇಕ ವರ್ಷಗಳಲ್ಲಿ ಈ ವಿಷಯಗಳನ್ನು ಎಂದರೆ ಇಸ್ಲಾಮಿನ ಈ ಮೂಲ ತತ್ವಗಳನ್ನು ಪದೇ ಪದೇ ಜನರ ಮುಂದೆ ಪ್ರಕಟಿಸಿದ್ದೇನೆ.

ನಾನು ಹೇಳುತ್ತಿರುವುದು ಇಸ್ಲಾಮ್ ಧರ್ಮದ ನೈಜ ತತ್ವಗಳೇ ಆಗಿವೆ ಎಂದು ಸ್ಪಷ್ಟಪಡಿಸಲಿಕ್ಕಾಗಿ ನಾನು ಪದೇ ಪದೇ ಪವಿತ್ರ ಖುರ್‌ಆನಿನ ವಚನಗಳನ್ನು



ತಾಯಿ ತನ್ನ ಮಕ್ಕಳನ್ನು ಪ್ರೀತಿಸುವ ರೀತಿಯಲ್ಲಿ ಯಥಾರ್ಥ ಮುಸ್ಲಿಮ್ ಎಲ್ಲರನ್ನು ಪ್ರೀತಿಸುತ್ತಾನೆ.

Rafal Olechowski | Shutterstock.com

ಉಲ್ಲೇಖಿಸುತ್ತಿರುವೆನು. ಆದರೆ ನಮ್ಮ ಸಮಗ್ರ ಮತ್ತು ಶಾಂತಿಯುತ ಸಂದೇಶಗಳನ್ನು ಸಂಪರ್ಕ ಮಾಧ್ಯಮಗಳು ವ್ಯಾಪಕವಾಗಿ ಪ್ರಕಟಿಸುವುದಿಲ್ಲ. ಆದರೆ ಅಲ್ಪ ಸಂಖ್ಯೆಯ ಕೆಲವು ಜನರ ಬರ್ಬರ ಕೃತ್ಯಗಳು ಮತ್ತು ನರಸಂಹಾರದ ಬಗ್ಗೆ ನಿರಂತರವಾಗಿ ಮತ್ತು ಲೋಕಜನರ ಗಮನಸೆಳೆಯುವ ರೀತಿಯಲ್ಲಿ ಪ್ರಸಾರ ಮಾಡಲಾಗುತ್ತದೆ.

ಇಂದಿನ ಕಾಲದಲ್ಲಿ ಸಂಪರ್ಕ ಮಾಧ್ಯಮಗಳು ಜನರ ಅಭಿಪ್ರಾಯಗಳನ್ನು ರೂಪಿಸುವುದರಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತವೆ ಎನ್ನುವುದು ಸಂಶಯಾತೀತವಾಗಿದೆ. ಆದ್ದರಿಂದ ಶಾಂತಿ ಸ್ಥಾಪನೆಗೆ ಮತ್ತು ಜನಹಿತಕ್ಕಾಗಿ ಸಂಪರ್ಕ ಮಾಧ್ಯಮಗಳು ತಮ್ಮ ಈ ಶಕ್ತಿಯನ್ನು ಹೊಣೆಯನ್ನರಿತು ಬಳಸಬೇಕು. ಅಲ್ಪಸಂಖ್ಯೆಯ ಕೆಲವರು ಮಾಡುವ ನಿರ್ದಯ ಕೃತ್ಯಗಳನ್ನು ಮಾತ್ರ ಪ್ರಚಾರಮಾಡುವ ಬದಲಿಗೆ ನೈಜ ಇಸ್ಲಾಮ್ ಏನನ್ನು ಪ್ರತಿನಿಧೀಕರಿಸುತ್ತದೆ ಎಂದು ಲೋಕಕ್ಕೆ ತಿಳಿಸಿಕೊಡಬೇಕು.

**ಸಂಪರ್ಕ ಮಾಧ್ಯಮದವರು ನಾನು ಹೇಳಿದುದನ್ನು ಲಕ್ಷಿಸಿ ಕಾರ್ಯ ಪ್ರವೃತ್ತರಾಗುವರಾದರೆ ಲೋಕವನ್ನು ಬಾಧಿಸುತ್ತಿರುವ ಭಯೋತ್ಪಾದಕ ಕೃತ್ಯಗಳು ಬೇಗನೆ ಸಾಯಲು ತೊಡಗುವುದಾಗಿ ನಾವು ಕಾಣುವೆವು.**

ಬಹುತೇಕ ಭಯೋತ್ಪಾದಕ ಅಥವಾ ಉಗ್ರಗಾಮಿ ಗುಂಪುಗಳನ್ನು ಜೀವಂತವಾಗಿರಿಸುವ ಆಕ್ಸಿಜನ್ (ಪ್ರಾಣವಾಯು) ಮಾಧ್ಯಮಗಳಲ್ಲಿ ಅವುಗಳಿಗೆ ದೊರಕುವ ಪ್ರಚಾರವಾಗಿದೆ. ಸಂಪರ್ಕ ಮಾಧ್ಯಮದವರು ನಾನು ಹೇಳಿದುದನ್ನು ಲಕ್ಷಿಸಿ ಕಾರ್ಯ ಪ್ರವೃತ್ತರಾಗುವರಾದರೆ ಲೋಕವನ್ನು ಬಾಧಿಸುತ್ತಿರುವ ಭಯೋತ್ಪಾದಕ ಕೃತ್ಯಗಳು ಬೇಗನೆ ಸಾಯಲು ತೊಡಗುವುದಾಗಿ ನಾವು ಕಾಣುವೆವು. ಇಸ್ಲಾಮನ್ನು ಕೆಡಿಸಿ ಅದರ ಶ್ರೇಷ್ಠ ತತ್ವಗಳನ್ನು ಉಲ್ಲಂಘಿಸುವವರು ತಮ್ಮ ದ್ವೇಷಭರಿತ ಕೃತ್ಯಗಳನ್ನು ಹೇಗೆ ತಾನೆ ಇಸ್ಲಾಮಿನ ಹೆಸರಲ್ಲಿ ಸಮರ್ಥಿಸಲು ಸಾಧ್ಯ ಎನ್ನುವುದು ನನಗೆ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ.

ಶಾಂತಿಗೆ ಸಂಬಂಧಿಸಿದ ಇಸ್ಲಾಮಿನ ಉಪದೇಶಗಳು ಎಲ್ಲ ರೀತಿಗಳ ಉಗ್ರಗಾಮಿ ಚಟುವಟಿಕೆಗಳನ್ನು ನಿಷಿದ್ಧಗೊಳಿಸಿವೆ. ನ್ಯಾಯಬದ್ಧವಾಗಿ ಯುದ್ಧ ನಡೆಸುವ ಸಂದರ್ಭದಲ್ಲಿ ಕೂಡ ಅಪರಾಧಕ್ಕೆ ಸಮಾನವಾದ ಶಿಕ್ಷೆ ನೀಡಬೇಕೆಂದೂ ಸಹನೆ ಮತ್ತು ಕ್ಷಮೆಯಿಂದ ವರ್ತಿಸುವುದು ಉತ್ತಮವೆಂದೂ ಅಲ್ಲಾಹನು ಆಜ್ಞಾಪಿಸಿದ್ದಾನೆ. ಆದುದರಿಂದ ಹಿಂಸಾಚಾರ, ಅನ್ಯಾಯ ಮತ್ತು ಕ್ರೌರ್ಯದಿಂದ ವರ್ತಿಸುವ ಮುಸ್ಲಿಮ್ ನಾಮಧಾರಿಗಳು ಅಲ್ಲಾಹನ ಕ್ರೋಧವನ್ನು ತಮ್ಮ ಕಡೆಗೆ ಆಹ್ವಾನಿಸುವವರಾಗಿದ್ದಾರೆ.

ಇಸ್ಲಾಮ್ ಬಗ್ಗೆ ಭಯ ವರ್ಧಿಸುತ್ತಿರುವ ಈ ಕಾಲದಲ್ಲಿ ನಾನು ಒತ್ತಿ ಹೇಳಲು ಬಯಸುತ್ತೇನೆ: ಪವಿತ್ರ ಖುರ್‌ಆನ್ ಪ್ರೀತಿ, ಕಾರುಣ್ಯ ಮತ್ತು ಪರೋಪಕಾರದ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ ಪವಿತ್ರ ಖುರ್‌ಆನ್ ಪ್ರತಿರೋಧಾತ್ಮಕ ಯುದ್ಧವನ್ನು ಅನುಮತಿಸಿರುವುದು ಶಾಂತಿಯನ್ನು ಸ್ಥಾಪಿಸಲಿಕ್ಕೋಸ್ಕರ ಮಾತ್ರವಾಗಿದೆ. ಇಂದಿನ ಕಾಲದಲ್ಲಿ ಸಹ ಬಹುತೇಕ ಯುದ್ಧ ಮಾಡುತ್ತಿರುವ ಸರಕಾರಗಳು ಅಥವಾ ಗುಂಪುಗಳು, ಅವರು ಮುಸ್ಲಿಮರಾದರೂ ಮುಸ್ಲಿಮೇತರರಾದರೂ ತಾವು ಹೋರಾಡುವುದು ಶಾಂತಿಯನ್ನು ಸ್ಥಾಪಿಸಲಿಕ್ಕೋಸ್ಕರ ಎಂದು ಹೇಳುತ್ತಾರೆಂದು ನಾವು ಕಾಣುತ್ತಿದ್ದೇವೆ.


ಜನರ ಗ್ರಹಿಕೆಗೆ ಸಂಬಂಧಿಸಿ ಹೇಳುವುದಾದರೆ, ಕೆಲವು ಜಾಗತಿಕ ಶಕ್ತಿ ರಾಷ್ಟ್ರಗಳು ಮಾಡುವ ಯುದ್ಧಗಳನ್ನು ನಿರ್ಲಕ್ಷಿಸಲು ಬಹುತೇಕ ಜನರು ಬಯಸುತ್ತಾರೆ ಅಥವಾ ಕಡಿಮೆ ಪಕ್ಷ ಆ ಯುದ್ಧಗಳನ್ನು ಯಾವುದೇ ಧರ್ಮ ಮತ್ತು ವಿಶ್ವಾಸದೊಂದಿಗೆ ಜೋಡಿಸುವುದಿಲ್ಲ. ಆದರೆ ಇಸ್ಲಾಮಿನ ಉಪದೇಶಗಳನ್ನು ದೂಷಣೆಗೆ ಗುರಿಪಡಿಸಲಾಗುತ್ತಿರುವ ಈ ಕಾಲಘಟ್ಟದಲ್ಲಿ ಮುಸ್ಲಿಮರು ನಡೆಸುವ ಎಲ್ಲ ಕ್ರೌರ್ಯಗಳನ್ನು ಮತ್ತು ಯುದ್ಧಗಳನ್ನು ತಕ್ಷಣವೇ ಇಸ್ಲಾಮ್ ಧರ್ಮದೊಂದಿಗೆ ಸಂಬಂಧ ಕಲ್ಪಿಸಲಾಗುತ್ತದೆ. ಆದರೆ ಇಸ್ಲಾಮಿನ ನೈಜ ಶಾಂತಿಪ್ರಿಯ ತತ್ವಗಳನ್ನು ಪ್ರಚಾರ ಮಾಡಲು ಪರಿಶ್ರಮಪಡುವ ಜನರ ಶಬ್ದಗಳು ಆಲಿಸಲ್ಪಡುವುದಿಲ್ಲ ಮತ್ತು ಅವುಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವುದೂ ಇಲ್ಲ.

ಇದು ನನ್ನ ಅಭಿಪ್ರಾಯದಲ್ಲಿ ಅನ್ಯಾಯಕರವೂ ಅತ್ಯಂತ ವಿರುದ್ಧ ಪರಿಣಾಮಕವೂ ಆಗಿದೆ. ಜಾಗತಿಕ ಸಂಘರ್ಷಗಳ ಈ ಕಾಲದಲ್ಲಿ ನಾವು ನೆನಪಿಡಬೇಕಾದ ಮೂಲಭೂತ ತತ್ವವೇನೆಂದರೆ ಎಲ್ಲ ವಿಧ ಕೆಡುಕು ಮತ್ತು ಕ್ರೌರ್ಯಗಳನ್ನು ದಮನಿಸಬೇಕು ಹಾಗೂ ಎಲ್ಲ

ರೀತಿಯ ಒಳಿತುಗಳನ್ನು ಮತ್ತು ಮಾನವೀಯತೆಯನ್ನು ದೃಢಪಡಿಸಬೇಕು. ಹೀಗೆ ಮಾಡಿದರೆ ಕೆಡುಕು ವ್ಯಾಪಕವಾಗಿ ಹಬ್ಬಲಾರದು; ಅದೇ ವೇಳೆ ಒಳಿತು ಮತ್ತು ಶಾಂತಿ ಎಲ್ಲೆಡೆ ಹರಡಿ ನಮ್ಮ ಸಮಾಜವನ್ನು ಅಲಂಕರಿಸುವುದು.

ಲೋಕದಲ್ಲಿ ಸಂಭವಿಸುತ್ತಿರುವ ಒಳಿತನ್ನು ಪ್ರೋತ್ಸಾಹಿಸುವುದಾದರೆ ನಾವು ಕಾಳಜಿಯಿಂದ ಕಾಣುವ ಮಾನವೀಯ ಮತ್ತು ಕರುಣೆಯ ಮೌಲ್ಯಗಳನ್ನು ಧ್ವಂಸಗೊಳಿಸಲು ಯತ್ನಿಸುವವರ ಮೇಲೆ ಜಯಗಳಿಸಬಲ್ಲೆವು. ಆದರೆ ಲೋಕ ಈ ತತ್ವವನ್ನು ಮನವರಿಕೆ ಮಾಡಿಕೊಂಡಿಲ್ಲ ಮತ್ತು ಅದನ್ನು ಅಂಗೀಕರಿಸುವುದೂ ಇಲ್ಲ. ಈ ಕಾರಣದಿಂದ ಮಾಧ್ಯಮಗಳು ಲೋಕಶಾಂತಿಗೆ ಸಂಬಂಧಿಸದ ವಿಷಯಗಳಿಗೆ ಆದ್ಯತೆ ನೀಡುತ್ತವೆ ಮತ್ತು ಅವುಗಳ ಬಗ್ಗೆಗಿನ ಅಂಕೆ ಅಂಶಗಳಿಗೆ ಪ್ರಚಾರ ನೀಡುತ್ತವೆ. ಅವು ಕ್ರೌರ್ಯಕೃತ್ಯ ಮಾಡುವ ಚಿಕ್ಕಪುಟ್ಟ ಗುಂಪುಗಳಿಗೆ ಮತ್ತು ದಾಯೆಶ್‌ನಂತಹ ಕೆಟ್ಟ ಗುಂಪುಗಳ ಪ್ರಚಾರ ಯಂತ್ರಗಳಿಗೆ ಇಂಧನ ನೀಡುತ್ತವೆ. ಆದರೆ ಲೋಕದಲ್ಲಿರುವ ಒಳಿತುಗಳ ಬಗ್ಗೆ ಎತ್ತಿ ತೋರಿಸಬೇಕಾದ ತಮ್ಮ ಕರ್ತವ್ಯ ನಿರ್ವಹಿಸುವುದೂ ಇಲ್ಲ.

ಇದು ಇನ್ನಷ್ಟು ಒಡಕು ಮತ್ತು ಸಂಘರ್ಷದ ಬೀಜವನ್ನು ಬಿತ್ತುವ ಅನ್ಯಾಯದ ವರ್ತನೆಯಾಗಿದೆ. ಜಾಗತಿಕ ರಾಜಕಾರಣ ಮತ್ತು ಭಯೋತ್ಪಾದನೆಯನ್ನು ಸೋಲಿಸುವ ಬಗ್ಗೆ ಹೇಳುವುದಾದರೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಪರಮೋಚ್ಚ ಉದ್ದೇಶವೆಂದು ಅಂಗೀಕರಿಸಬೇಕಾಗಿದೆ. ಆದುದರಿಂದ ಎಲ್ಲ ಭಾಗಗಳಿಂದಲೂ ಸಹಕಾರ ಆವಶ್ಯಕವಾಗಿದೆ. ನೀವು ಒಬ್ಬ ಮುಸ್ಲಿಮನ ಮಾತುಗಳನ್ನು ನಂಬುವುದಿಲ್ಲವಾದರೆ ಜಾಗತಿಕ ರಾಜಕಾರಣದ ಬಗ್ಗೆ ಪರಿಣಿತರಾದ ಮತ್ತು ಜಾಗತಿಕ ಶಾಂತಿಯನ್ನು ಆಶಿಸುವವರಾದ ಕೆಲವು ಗಣ್ಯ ಮುಸ್ಲಿಮೇತರ ಮಹಾನುಭಾವರ ಮಾತುಗಳನ್ನು ಆಲಿಸಿರಿ.



ಮಾಧ್ಯಮಗಳು ಇತರ ಕಾರ್ಯಕ್ರಮಗಳ ಮೇಲೆ ಶಾಂತಿಗೆ ಆದ್ಯತೆ ನೀಡುವುದಾದರೆ, ನಾವು ಬೇಗನೆ ದಾಯಿಶ್ ಮತ್ತು ಇತರ ಭಯೋತ್ಪಾದಕ ಗುಂಪುಗಳ ಅಂತ್ಯವನ್ನು ಕಾಣುವೆವು.

Brian A. Jackson | Shutterstock.com

ಉದಾಹರಣೆಗೆ, ಭಯೋತ್ಪಾದನೆಯನ್ನು ಮತ್ತು ವಿಶಿಷ್ಟವಾಗಿ ಭಯೋತ್ಪಾದಕ ಗುಂಪಾದ ದಾಯೆಶನ್ನು ಸೋಲಿಸುವ ಬಗ್ಗೆ ಆಸ್ಟ್ರೀಯ ದೇಶದ ವಿದೇಶಕಾರ್ಯ ಮಂತ್ರಿ ಹೀಗೆ ಹೇಳಿದರು:

"ನಾವು ಪ್ರಾಯೋಗಿಕ ಮನೋಭಾವ ಹೊಂದಬೇಕು. ಪ್ರೆಸಿಡೆಂಟ್ ಅಲ್ ಅಸದ್‌ರನ್ನು ತೊಡಗಿಸಿಕೊಂಡು ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದನೆಯ ವಿರುದ್ಧ ಹೋರಾಡಬೇಕು. ನನ್ನ ಅಭಿಪ್ರಾಯದಲ್ಲಿ ಭಯೋತ್ಪಾದನೆ ವಿರುದ್ಧ ಹೋರಾಟಕ್ಕೆ ಆದ್ಯತೆ ನೀಡಬೇಕು. ರಶ್ಯ ಮತ್ತು ಇರಾನಿನಂತಹ ದೇಶಗಳ ಸಹಾಯ ಪಡೆಯದೆ ಇದು ಸಾಧ್ಯವಾಗದು."

ದಿ ಲಂಡನ್ ಸ್ಕೂಲ್ ಆಫ್ ಎಕೋನೋಮಿಕ್ಸ್‌ನಲ್ಲಿ ಅನೇಕ ವರ್ಷಗಳ ಕಾಲ ಕಲಿಸುತ್ತಿದ್ದ ನಿವೃತ್ತ ಪೊಲಿಟಿಕಲ್ ಫಿಲಾಸಫರ್ ಪ್ರೊಫೆಸರ್ ಜಾನ್ ಗ್ರೇ ಇತ್ತೀಚೆಗೆ ಬರೆದ ಲೇಖನದಲ್ಲಿ ಶಾಂತಿ ಸ್ಥಾಪನೆಗೆ ಆದ್ಯತೆ ನೀಡುವ ಪ್ರಾಮುಖ್ಯತೆ ಬಗ್ಗೆ ಪ್ರತಿಪಾದಿಸಿದ್ದರು.

**ವಾರ್ತಾ ಮಾಧ್ಯಮಗಳು ಕ್ರೌರ್ಯಕೃತ್ಯ ಮಾಡುವ ಚಿಕ್ಕಪುಟ್ಟ ಗುಂಪುಗಳಿಗೆ ಮತ್ತು ದಾಯೆಶ್‌ನಂತಹ ಕೆಟ್ಟ ಗುಂಪುಗಳ ಪ್ರಚಾರ ಯಂತ್ರಗಳಿಗೆ ಇಂಧನ ನೀಡುತ್ತವೆ. ಆದರೆ ಲೋಕದಲ್ಲಿರುವ ಒಳಿತುಗಳ ಬಗ್ಗೆ ಎತ್ತಿ ತೋರಿಸಬೇಕಾದ ತಮ್ಮ ಕರ್ತವ್ಯ ನಿರ್ವಹಿಸುವುದೂ ಇಲ್ಲ.**

ಪ್ರೊಫೆಸರ್ ಜಾನ್ ಗ್ರೇ ಹೀಗೆ ಬರೆದರು:

“ಸರಕಾರದ ವಿಧಾನ – ಪ್ರಜಾಪ್ರಭುತ್ವ, ನಿರಂಕುಶ ಪ್ರಭುತ್ವ, ದೊರೆಯಾಡಳಿತೆ ಅಥವಾ ಜನರಾಡಳಿತೆ ಯಾವುದೇ ಆಗಿರಲಿ, ಅವು ಶಾಂತಿ ಸ್ಥಾಪಿಸುವುದಕ್ಕಿಂತ ಕಡಿಮೆ ಮಹತ್ವ ಪೂರ್ಣವಾಗಿದೆ.”

ನನ್ನ ಅಭಿಪ್ರಾಯ ಪ್ರಕಾರ ಇದು ಅತ್ಯಂತ ಸೂಕ್ಷ್ಮ ದರ್ಶಿತ್ವದಿಂದ ಕೂಡಿದ ಅಭಿಪ್ರಾಯ ಪ್ರಕಟಣೆಯಾಗಿದೆ. ಆದರೆ ಇಂದಿನ ಲೋಕದ ಪ್ರಮುಖ ಶಕ್ತಿಶಾಲಿ ದೇಶಗಳು ಸ್ಥಿರಸ್ಥಿತಿಯಲ್ಲಿದ್ದ ದೇಶಗಳಲ್ಲಿ ಕೂಡ ಆಡಳಿತೆಗಳ ಬದಲಾವಣೆಗೆ ಆದ್ಯತೆ ನೀಡುತ್ತಿವೆ.

ಉದಾಹರಣೆಗೆ, ಪಾಶ್ಚಿಮಾತ್ಯ ದೇಶಗಳು ಇರಾಕ್‌ನಿಂದ ಸದ್ದಾಮ್ ಹುಸೈನನ್ನು ಅಧಿಕಾರ ಚ್ಯುತಿಗೊಳಿಸಲು ದೃಢನಿರ್ಧಾರ ಮಾಡಿದುವು. ಹದಿಮೂರು ವರ್ಷಗಳ ಹಿಂದೆ ನಡೆದ ಆ ಯುದ್ಧದ ದಾರುಣ ಪರಿಣಾಮಗಳು ಇಂದು ಸಹ ಮುಂದುವರಿಯುತ್ತಿವೆ. ಇನ್ನೊಂದು ಉದಾಹರಣೆ, ಲಿಬಿಯಾ ದೇಶದ್ದಾಗಿದೆ. 2011ರಲ್ಲಿ ಪ್ರಸಿಡೆಂಟ್ ಗದ್ದಾಫಿಯನ್ನು ಅಧಿಕಾರದಿಂದ ಬಲವಂತವಾಗಿ ಹೊರದೂಡಲಾಯಿತು. ಅಂದಿನಿಂದ ಲಿಬಿಯಾ ದೇಶ ಅರಾಜಕತೆ ಮತ್ತು ಅನಿಯಂತ್ರಿತ ವಿನಾಶದಿಂದ ಭರಿತವಾಗಿದೆ.

ಲಿಬಿಯಾದಲ್ಲಿ ಸಂಭವಿಸಿದ ರಾಜಕೀಯ ಶೂನ್ಯತೆಯ ಕಾರಣದಿಂದ ದಾಯೆಶ್ ಅಲ್ಲಿ ತನ್ನ ಭಯೋತ್ಪಾದಕ ಚಟುವಟಿಕೆಗಳಿಗೆ ಪ್ರಮುಖ ತಾಣವನ್ನು ಸೃಷ್ಟಿಸಿಕೊಂಡಿದೆ ಮತ್ತು ಅದು ಬಲಿಷ್ಠವಾಗುತ್ತಿದೆ. ಇದು ಈ ಪ್ರದೇಶಕ್ಕೆ ಮಾತ್ರವಲ್ಲ ಯೂರೋಪಿಗೂ ಅಪಾಯಕಾರಿಯಾಗಿದೆ. ನಾನು ಇದರ ಬಗ್ಗೆ ಹಿಂದೆಯೇ ಮುನ್ನೆಚ್ಚರಿಕೆ ನೀಡಿದ್ದೆ. ಆದುದರಿಂದ ಅಂತಹ ದೇಶಗಳಲ್ಲಿ ಆಡಳಿತಾಧಿಕಾರಿಗಳನ್ನು ಬದಲಾಯಿಸುವ ಬಗ್ಗೆ ಆದ್ಯತೆ ನೀಡಬಾರದು. ಅದಕ್ಕೆ ಬದಲಾಗಿ ಆ ದೇಶಗಳ ಜನರಿಗೆ ಅವರ ಹಕ್ಕುಗಳನ್ನು ನೀಡುವ ಬಗ್ಗೆ ಮತ್ತು ಸ್ಥಿರವಾದ ಶಾಂತಿ ಸ್ಥಾಪನೆ ಬಗ್ಗೆ ಆದ್ಯತೆ ನೀಡಬೇಕು.

ಸಿರಿಯಾದ ಬಗ್ಗೆ ಪುನಃ ಹೇಳುವುದಾದರೆ, ನಾನು ಆಸ್ಟ್ರೀಯದ ವಿದೇಶಕಾರ್ಯ ಮಂತ್ರಿಯ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ಆ ದೇಶದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಆದ್ಯತೆ ನೀಡಬೇಕು. ಆದುದರಿಂದ ಮಹಾಶಕ್ತಿ ರಾಷ್ಟ್ರಗಳು ಸಿರಿಯಾದ ಸರಕಾರದೊಂದಿಗೆ ಸಂವಾದದ ಮಾರ್ಗ ತೆರೆಯಬೇಕು ಮತ್ತು ಅಲ್ಲಿ ಪ್ರಭಾವಶಾಲಿಯಾಗಿರುವ ನೆರೆಹೊರೆಯ ದೇಶಗಳ ನೆರವು ಅಪೇಕ್ಷಿಸಬೇಕು.

ಉತ್ತಮ ಪರಿಣಾಮ ಉಂಟಾಗಲು ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗೆ ಸರಿಸಿ ಬಹುಜನರಿಗೆ ಹಿತಕರವಾದ ರೀತಿಯಲ್ಲಿ ಮತ್ತು ಎಲ್ಲ ಸಂದರ್ಭಗಳಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುವುದು ಆವಶ್ಯಕವಾಗಿದೆ ಎನ್ನುವುದನ್ನು ನೆನಪಿಸಬೇಕು. ನಾನು ಹಿಂದೆ ಹೇಳಿದ ಹಾಗೆ, ನ್ಯಾಯದ ಅಸ್ತಿಭಾರದ ಮೇಲೆ ಶಾಂತಿ ನಿರ್ಮಿಸಲ್ಪಡುತ್ತದೆ ಎಂದು ಇಸ್ಲಾಂ ಪ್ರತಿಪಾದಿಸುತ್ತದೆ.

ನಾವು ನಮ್ಮ ಕಾಲದ ಸಮಸ್ಯೆಗಳ ಬಗ್ಗೆ ತುರ್ತಾಗಿ ಗಮನ ಹರಿಸಬೇಕು. ಲೋಕವು ಇನ್ನೊಂದು ಮಹಾಯುದ್ಧದ ಕಡೆಗೆ ಸಾಗುತ್ತಿರುವುದಾಗಿ ನಾನು ಅನೇಕ ವರ್ಷಗಳಿಂದ ಮುನ್ನೆಚ್ಚರಿಕೆ ನೀಡುತ್ತಿದ್ದೆ. ಈಗ ಇತರರೂ ಇದೇ ಅಭಿಪ್ರಾಯಕ್ಕೆ ಬರುತ್ತಿದ್ದಾರೆ.

ಇನ್ನೊಂದು ಜಾಗತಿಕ ಯುದ್ಧ ಪ್ರಾರಂಭವಾಗಿದೆ ಎಂದು ಕೆಲವು ಗಣ್ಯರು ಹೇಳುತ್ತಿದ್ದಾರೆ. ಆದರೆ ನಾನು ಹೇಳುವುದೇನೆಂದರೆ, ಇನ್ನೊಂದು ಜಾಗತಿಕ ಯುದ್ಧವನ್ನು ತಡೆಗಟ್ಟಲು ನಮಗೆ ಇನ್ನೂ ಸಮಯಾವಕಾಶವಿದೆ. ಆದರೆ ಇದಕ್ಕೆ ಆವಶ್ಯಕವಾದುದು ಸ್ವಾರ್ಥ ಹಿತಾಸಕ್ತಿಗಳನ್ನು ತೊರೆಯುವುದು ಮತ್ತು ನ್ಯಾಯಪಾಲನೆ ಮಾಡುವುದಾಗಿದೆ. ನಾನು ಇದರ ಮೊದಲು ಅನೇಕ ಸಂದರ್ಭಗಳಲ್ಲಿ ಭಯೋತ್ಪಾದಕ ಗುಂಪುಗಳಿಗೆ ಸಿಗುವ ಸಾಂಪತ್ತಿಕ ಸಹಾಯಗಳನ್ನು ಕಡಿದು ಹಾಕುವ ಬಗ್ಗೆ ಮತ್ತು ಅವರಿಗೆ ಸರಕುಗಳ ಪೂರೈಕೆ ತಡೆಯುವ ಬಗ್ಗೆ ತುರ್ತಾಗಿ ಗಮನ ಹರಿಸುವ ಕುರಿತು ಪ್ರಸ್ತಾಪಿಸಿದ್ದೆ.

ಈ ನಿಟ್ಟಿನಲ್ಲಿ ಪರಿಪೂರ್ಣ ಪ್ರಯತ್ನಗಳನ್ನು ನಡೆಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇತ್ತೀಚೆಗೆ "ದಿ ವಾಲ್ ಸ್ಟ್ರೀಟ್ ಜರ್ನಲ್"ನಲ್ಲಿ (The Wall Street Journal) ಪ್ರಕಟವಾದ ಒಂದು ತಪಾಸಣೆ ವರದಿಯಲ್ಲಿ ಹೀಗೆ ಬರೆಯಲಾಗಿದೆ. ಇರಾಕಿನ ಸೆಂಟ್ರಲ್ ಬ್ಯಾಂಕ್ ನಡೆಸುವ ಏಲಂ ಮೂಲಕ ದಾಯೆಶ್ ಉಗ್ರರು ಡಾಲರ್‌ಗಳನ್ನು ಬೃಹತ್ ಪ್ರಮಾಣದಲ್ಲಿ ಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ.

ಈ ಡಾಲರ್‌ಗಳನ್ನು ಯುನೈಟೆಡ್ ಸ್ಟೇಟ್ಸ್ ಸರಕಾರದ ಫೆಡರಲ್ ರಿಸರ್ವ್ ಬ್ಯಾಂಕ್‌ನಿಂದ ಇರಾಖ್‌ಗೆ ನೇರವಾಗಿ ಪೂರೈಕೆ ಮಾಡಲಾಗುತ್ತಿದೆ. ಲೇಖನದಲ್ಲಿ ಹೀಗೆ ಬರೆಯಲಾಗಿದೆ: 2015 ಜೂನ್ ತಿಂಗಳಿನಿಂದಲೇ ಈ ವಿಷಯ ಯು.ಎಸ್. ಸರಕಾರಕ್ಕೆ ತಿಳಿದಿದೆ. ಆದರೆ ಈ ವಿಷಯ ಅಮೇರಿಕದ ಸರಕಾರಕ್ಕೆ ಅದಕ್ಕಿಂತ



ಒಂದು ಸುಭದ್ರವಾದ ಸರ್ಕಾರವನ್ನು ರೂಪಿಸಲು ಪ್ರಯತ್ನಿಸುವುದಕ್ಕಿಂತ ಮುಖ್ಯ ಸ್ಥಿರವಾದ ಶಾಂತಿಯುತ ಸಮಾಜವನ್ನು ಸ್ಥಾಪಿಸಲು ಸರ್ಕಾರ ಪ್ರಯತ್ನಿಸುವುದಾಗಿದೆ.

Anurak Pongpatimet | Shutterstock.com

ಎಷ್ಟೋ ಕಾಲ ಹಿಂದಿನಿಂದ ತಿಳಿದಿತ್ತು ಎಂದು ನಾನು ನಂಬುತ್ತೇನೆ.

ತೈಲ ಮಾರಾಟದ ಬಗ್ಗೆ ಹೇಳುವುದಾದರೆ, ದಾಯೆಶ್‌ನಿಂದ ವಿವಿಧ ಗುಂಪುಗಳು ಮತ್ತು ಸರಕಾರಗಳು ತೈಲವನ್ನು ಖರೀದಿಸುತ್ತವೆ. ಈ ವ್ಯಾಪಾರವನ್ನು ಯಾಕೆ ತಡೆಗಟ್ಟಿಲ್ಲ? ಇಂತಹ ವ್ಯವಹಾರಗಳನ್ನು ತಡೆಯಲು ನಿರ್ಬಂಧಗಳನ್ನು ಯಾಕೆ ಹೇರಿಲ್ಲ? ತೈಲವನ್ನು ಗಳಿಸುವುದಕ್ಕೆ ಸಂಬಂಧಿಸಿ ನೈತಿಕತೆ ಕಿಟಿಕಿಯಿಂದ ಹೊರಹೋಗುತ್ತದೆ ಎಂದು ತೋಚುತ್ತದೆ. ಇದೇ ವಿಷಯವನ್ನು ಲಂಡನಿನ ಕಿಂಗ್ಸ್ ಕಾಲೇಜಿನ ಪ್ರೊಫೆಸರ್ ಲೈಫ್ ವೇನರ್ (Leif Wenar) ಇತ್ತೀಚೆಗೆ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ:

"ತೈಲವನ್ನು ಗಳಿಸಲು ಲೋಕವು ಎಲ್ಲ ವಿಧ ಘೋರ ಅಮಾನವೀಯ ಕೃತ್ಯಗಳನ್ನು ಸಹಿಸುತ್ತದೆ. ಮಾನವ ಹಕ್ಕುಗಳನ್ನು ಧಾರಾಳವಾಗಿ ಉಲ್ಲಂಘಿಸುವ ದಾಯೆಶ್‌ನಿಂದಲೂ ಸೂಡಾನ್‌ನಿಂದಲೂ ವಿವಿಧ

**ತೈಲ ಮಾರಾಟದ ಬಗ್ಗೆ ಹೇಳುವುದಾದರೆ, ದಾಯೆಶ್‌ನಿಂದ ವಿವಿಧ ಗುಂಪುಗಳು ಮತ್ತು ಸರಕಾರಗಳು ತೈಲವನ್ನು ಖರೀದಿಸುತ್ತವೆ. ಈ ವ್ಯಾಪಾರವನ್ನು ಯಾಕೆ ತಡೆಗಟ್ಟಿಲ್ಲ? ಇಂತಹ ವ್ಯವಹಾರಗಳನ್ನು ತಡೆಯಲು ನಿರ್ಬಂಧಗಳನ್ನು ಯಾಕೆ ಹೇರಿಲ್ಲ? ತೈಲವನ್ನು ಗಳಿಸುವುದಕ್ಕೆ ಸಂಬಂಧಿಸಿ ನೈತಿಕತೆ ಕಿಟಿಕಿಯಿಂದ ಹೊರಹೋಗುತ್ತದೆ ಎಂದು ತೋಚುತ್ತದೆ.**

ದೇಶಗಳು ತೈಲವನ್ನು ಖರೀದಿಸಿವೆ. ಇದು ಮೂಲಭೂತ ಮಾರುಕಟ್ಟೆ ಆರ್ಥಿಕ ವ್ಯವಸ್ಥೆಗಳ ಉಲ್ಲಂಘನೆಯಾಗಿದೆ. ಹಾಗೆ ಹಿಂಸಾಚಾರಗಳ



ಇರಾಕಿನ ಸೆಂಟ್ರಲ್ ಬ್ಯಾಂಕ್ ಮುಖಾಂತರ ಫೆಡರಲ್ ರಿಸರ್ವ್ ಬ್ಯಾಂಕ್‌ನಿಂದ ದಾಯಿಶ್ ಡಾಲರ್‌ಗಳನ್ನು ಪಡೆಯುತ್ತದೆ. ಧನಪೂರೈಕೆಯನ್ನು ಮೂಲದಿಂದಲೇ ತಡೆಯುವುದಾದರೆ ನಾವು ಭಯೋತ್ಪಾದಕ ಗುಂಪುಗಳನ್ನು ಬೇಗನೇ ಕೊನೆಗೊಳಿಸಬಹುದು.

Tetra Images | Shutterstock.com

ಮೂಲಕ ಆಸ್ತಿ ಹಕ್ಕುಗಳನ್ನು ಪಡೆಯಬಾರದು ಎಂಬ ನಿಯಮವನ್ನು ಉಲ್ಲಂಘಿಸಲಾಗಿದೆ.”

ಇತ್ತೀಚೆಗೆ ಒಂದು ಲೇಖನದಲ್ಲಿ ಇರಾಕ್ ಎನರ್ಜಿ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್, ದಾಯೆಶ್ ತೈಲವನ್ನು ಹೇಗೆ ಮಾರಾಟ ಮಾಡುತ್ತಿದೆ ಎನ್ನುವ ಬಗ್ಗೆ ಹೀಗೆ ಬರೆದಿದ್ದಾರೆ:

“ಕಚ್ಚಾತೈಲವನ್ನು ಟ್ಯಾಂಕರ್‌ಗಳಲ್ಲಿ ಅಂಬರ್ ಪ್ರಾಂತ್ಯ ಮೂಲಕ ಜೋರ್ಡಾನಿಗೆ ಸಾಗಿಸಲಾಗುತ್ತಿದೆ. ಕುರ್ದಿಸ್ಥಾನ್ ಮೂಲಕ ಇರಾನಿಗೆ ಸಾಗಿಸಲಾಗುತ್ತಿದೆ. ಮೋಸುಲ್ ಮೂಲಕ ಟರ್ಕಿಗೆ ಮತ್ತು ಸಿರಿಯಾದ ಲೋಕಲ್ ಮಾರ್ಕೆಟ್‌ಗೆ, ಇರಾಕಿನ ಕುರ್ದಿಸ್ಥಾನಕ್ಕೆ ಸಾಗಿಸಲಾಗುತ್ತದೆ. ಅದರ ಬಹುತೇಕ ಭಾಗ ಸ್ಥಳೀಯವಾಗಿ ಶುದ್ಧೀಕರಿಸಲ್ಪಡುತ್ತದೆ. ಇದರಲ್ಲಿ ಸರಕಾರಿ ಅಧಿಕಾರಿಗಳು ಭಾಗವಹಿಸುವುದಿಲ್ಲ ಎಂದು ಹೇಳುವುದು ತರ್ಕಬದ್ಧವಾದ ಮಾತಲ್ಲ.”

ಭಯೋತ್ಪಾದನೆಯನ್ನು ನಿರ್ನಾಮಗೊಳಿಸಲು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗುತ್ತಿದ್ದರೂ ಸಾಕ್ಷ್ಯಗಳು ಈ ವಾದವನ್ನು ದೃಢೀಕರಿಸುವುದಿಲ್ಲ. ಹೀಗೆಲ್ಲ ನಡೆಯುವಾಗ ಲೋಕದಲ್ಲಿ ಸತ್ಯವಾದ ನ್ಯಾಯಪಾಲನೆ ನಡೆಯುತ್ತಿದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಪ್ರಾಮಾಣಿಕತೆ ಮತ್ತು ಸತ್ಯಸಂಧತೆ ಪ್ರಾಮುಖ್ಯತೆ ಪಡೆದಿವೆ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಇತ್ತೀಚೆಗೆ ಜಾಗತಿಕ ಆಯುಧ ವ್ಯಾಪಾರದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ.

ಸರಕಾರಿ ವರದಿಗಳ ಪ್ರಕಾರ ಕಳೆದ ವರ್ಷ ಯುನೈಟೆಡ್ ಸ್ಟೇಟ್ಸ್ 46.6 ಬಿಲಿಯನ್ ಡಾಲರ್ ಬೆಲೆಬಾಳುವ ಆಯುಧಗಳನ್ನು ರಫ್ತು ಮಾಡಿತು. ಅದು ಅದರ ಹಿಂದಿನ ವರ್ಷ ರಫ್ತು ಮಾಡಿದುದಕ್ಕಿಂತ 12 ಬಿಲಿಯನ್ ಡಾಲರ್ ಹೆಚ್ಚಿಗೆ ಆಗಿದೆ. ಈ ಆಯುಧಗಳ

ಬಹುತೇಕ ಭಾಗವನ್ನು ಮಧ್ಯಪೂರ್ವ ದೇಶಗಳಿಗೆ ರಫ್ತು ಮಾಡಲಾಯಿತು. ಸಿರಿಯಾ, ಇರಾಕ್, ಯಮನ್‌ಗಳಲ್ಲಿ ನಡೆಯುವ ಯುದ್ಧಗಳಿಗೆ ಅವುಗಳನ್ನು ಬಳಸಲಾಗಿದೆ. ಇಂತಹ ವ್ಯಾಪಾರ ನಡೆಯುತ್ತಿರುವಾಗ ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿತವಾಗುವುದಾದರೂ ಹೇಗೆ ಎಂದು ನಾನು ಪುನಃ ಕೇಳಲು ಬಯಸುತ್ತೇನೆ.

ನಾನು ಪ್ರಸ್ತಾಪಿಸಿದ ಉದಾಹರಣೆಗಳು ಬಹಿರಂಗವಾದುವುಗಳೇ ಆಗಿವೆ. ಅಭಿಪ್ರಾಯಗಳು ಗೌರವಾನ್ವಿತ ಅನ್ವೇಷಕರದ್ದು ಮತ್ತು ವಿಮರ್ಶಕರದ್ದಾಗಿವೆ. ಸಮಾಜದ ಎಲ್ಲ ಹಂತಗಳಲ್ಲೂ ದೇಶಗಳ ಮಧ್ಯೆಯೂ ನ್ಯಾಯಪಾಲನೆಯ ತತ್ವಗಳು ಪ್ರಕಟವಾಗುವ ತನಕ ನಾವು ಲೋಕದಲ್ಲಿ ವಾಸ್ತವಿಕ ಶಾಂತಿಯನ್ನು ಕಾಣಲಾರೆವು. ನ್ಯಾಯಪಾಲನೆ ಮಾಡುವುದಿಲ್ಲವಾದರೆ ದಾಯೆಶ್ ಮತ್ತು ಅವರ ಹಾಗಿರುವ ಉಗ್ರಗಾಮಿ ಗುಂಪುಗಳನ್ನು ಸೋಲಿಸಲು ದಶಕಗಳು ಬೇಕಾಗುವುವು.

ಆದರೆ ಈ ಸಂದೇಶದ ಕಡೆಗೆ ಲೋಕವು ಲಕ್ಷ್ಯ ನೀಡುವುದಾದರೆ ಮತ್ತು ನ್ಯಾಯಪಾಲನೆ ಮಾಡುವುದಾದರೆ ಭಯೋತ್ಪಾದಕರಿಗೆ ಭಂಡವಾಳ ಒದಗಿಸುವುದನ್ನು ಮತ್ತು ಸರಕು ಸಾಗಾಣಿಕೆ ಮಾಡುವುದನ್ನು ತಡೆಯಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಾದರೆ ಲೋಕಕ್ಕೆ ಚಿತ್ರಹಿಂಸೆ ನೀಡುತ್ತಿರುವ ಭಯೋತ್ಪಾದಕರ ಜಾಲಗಳನ್ನು ತಕ್ಷಣ ನಾಶಗೊಳಿಸಲು ಸಾಧ್ಯ. ಒಬ್ಬ ನಿವೃತ್ತ ಅಮೇರಿಕನ್ ಮಿಲಿಟರಿ ಜನರಲ್ ಇತ್ತೀಚೆಗೆ ಹೇಳಿದ ಹಾಗೆ ದಾಯೆಶ್ ವಿರುದ್ಧ ಹೋರಾಟ ಹತ್ತು ಅಥವಾ ಇಪ್ಪತ್ತು ವರ್ಷಗಳ ಕಾಲ ಮುಂದುವರಿಯುವ ಆವಶ್ಯಕತೆ ಇರಲಾರದು.


ಕೊನೆಯದಾಗಿ, ನನ್ನ ನಂಬಿಕೆ ಏನೆಂದರೆ, ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಿ ಅವನನ್ನು ತಮ್ಮ ಪರಿಪಾಲಕನಾಗಿ ಅಂಗೀಕರಿಸುವ ತನಕ ಯಥಾರ್ಥ ನ್ಯಾಯಪಾಲನೆ ಜಾರಿಗೊಳ್ಳಲಾರದು. ಮಾತ್ರವಲ್ಲ, ನಾವು ಮಾರಕ ಅಣುಬಾಂಬ್ ಪ್ರಯೋಗಿಸಲ್ಪಡುವ ಒಂದು ಯುದ್ಧವನ್ನು ಅನುಭವಿಸಬೇಕಾಗುವುದು. ಅದರ ವಿಧ್ವಂಸಕರ ಪರಿಣಾಮಗಳನ್ನು ನಮ್ಮ ಮುಂದಿನ ಪೀಳಿಗೆಗಳು ಅನುಭವಿಸುವುವು. ಲೋಕವು ಈ ನಿಜಸ್ಥಿತಿಯನ್ನು ಅರಿತುಕೊಳ್ಳುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಾವು ಮಾನವರ ಸೇವೆಗೋಸ್ಕರ ನಮ್ಮ ಪಾತ್ರವನ್ನು ನಿರ್ವಹಿಸುವವರಾಗಲಿ ಎಂದು ಸಹ ನಾನು ಪ್ರಾರ್ಥಿಸುತ್ತೇನೆ. ನ್ಯಾಯಪಾಲನೆಯ ಅಸ್ತಿಭಾರದ ಮೇಲೆ ಸ್ಥಾಪಿಸಲಾದ ಶಾಂತಿಯು ಲೋಕದ ಎಲ್ಲ ಭಾಗಗಳಲ್ಲಿ ಹರಡಲಿ ಎಂದು ಸಹ ನಾನು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ನಾನು ನಿಮಗೆ ನೀವು ಈ ಸಭೆಗೆ ಈ ಸಂಜೆ ನಮ್ಮೊಂದಿಗೆ ಸೇರಿರುವುದರಿಂದ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸುತ್ತೇನೆ.

ಅಲ್ಲಾಹನು ನಿಮ್ಮೆಲ್ಲರನ್ನು ಅನುಗ್ರಹಿಸಲಿ. ನಿಮಗೆ ಧನ್ಯವಾದಗಳು.

**(ಇಂಗ್ಲಿಷ್ ಭಾಷಣದಿಂದ ಅನುವಾದಿತ)**




ಹಝ್ರತ್ ಖಲೀಫತುಲ್ ಮಸೀಹ್ V ಮೌನ ಪ್ರಾರ್ಥನೆಗೆ ನೇತೃತ್ವ ವಹಿಸುತ್ತಿರುವುದು.





**ದೈವಿಕ ಆಜ್ಞೆಯಿಂದ ಮಕ್ಕಾ ಪಟ್ಟಣದಿಂದ ಒಂದು ಘೋಷಣೆ ಹೊರಟಿತು. ಜನರನ್ನು ಏಕದೇವನ ಕಡೆಗೆ ಆ ದನಿ ಆಹ್ವಾನಿಸಿತು. ಆ ಕರೆಗೆ ಕಿವಿಗೊಡುವ ಮನುಷ್ಯಕುಲಕ್ಕೆ ಇಹಪರ ಸಂತೋಷ, ನೈಜ ಘನತೆ, ಗೌರವ, ಅಭಿವೃದ್ಧಿ ಲಭಿಸುವುದು ಎಂದು ಆ ಕರೆ ಘೋಷಿಸಿತು.**

ಆ ಘೋಷಣೆ ಪ್ರವಾದಿ ಶ್ರೇಷ್ಠರಾದ ಹಝ್ರತ್ ಮುಹಮ್ಮದ್(ಸ) ಪೈಗಂಬರರದ್ದಾಗಿತ್ತು. ಲೋಕಚರಿತ್ರೆಯಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯ ಜೀವಚರಿತ್ರೆಯನ್ನು ಈ ಜನಪ್ರಿಯ ಗ್ರಂಥದಲ್ಲಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಅತ್ಯಂತ ಸರಳವಾಗಿ ವರ್ಣಿಸಿದ್ದಾರೆ.

Read online here: http://www.alislam.org/library/books/Life-of-Muhammad.pdf

Purchase book at : noorulislam@qadian.in




**ಲೋಕ ಈಗ ಬಹಳ ಸಂಕಷ್ಟಮಯ ಸ್ಥಿತಿಯಲ್ಲಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಹೊಸ ಮತ್ತು ತೀವ್ರ ಅಪಾಯಕರ ಪರಿಸ್ಥಿತಿಗಳನ್ನು ಪ್ರತಿ ಸಂದರ್ಭದಲ್ಲೂ ಪ್ರಕಟಿಸುತ್ತಿದೆ. ಈಗಿನ ಪರಿಸ್ಥಿತಿ ದ್ವಿತೀಯ ಲೋಕ ಮಹಾಯುದ್ಧವು ಆರಂಭವಾಗುವ ಮುಂಚಿನ ಲೋಕದ ಸ್ಥಿತಿಗೆ ಸಮಾನವಾಗಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಾ ಇದ್ದಾರೆ. ಭಯಾನಕವಾದ ತೃತೀಯ ಮಹಾಯುದ್ಧದ ಕಡೆಗೆ ಲೋಕವು ವೇಗದಿಂದ ಸಾಗುತ್ತಿರುವುದಾಗಿ ಭಾಸವಾಗುತ್ತಿದೆ. ಅಣ್ವಸ್ತ್ರ ಯುದ್ಧದ ದುಷ್ಪರಿಣಾಮಗಳು ನಮ್ಮ ಊಹೆಗೆ ನಿಲುಕದ್ದಾಗಿವೆ.**

ಅಮೇರಿಕದ ವಾಶಿಂಗ್‌ಟನ್ ಡಿ.ಸಿ.ಯ ಕೆಪಿಟೋಲ್ ಹಿಲ್, ಹೌಸ್ ಆಫ್ ಕಾಮನ್ಸ್, ಯುರೋಪಿಯನ್ ಪಾರ್ಲಿಮೆಂಟ್ ಮತ್ತು ಲೋಕದ ಇತರ ಪ್ರಮುಖ ಸ್ಥಳಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರ ಮತ್ತು ವಾಗ್ದತ್ತ ಮಸೀಹರ ಐದನೇ ಉತ್ತರಾಧಿಕಾರಿಯಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಮಾಡಿದ ಭಾಷಣಗಳನ್ನು ಈ ಪುಸ್ತಕದಲ್ಲಿ ಸಂಕಲಿಸಲಾಗಿದೆ. ಹಝ್ರತ್ ಖ಼ಲೀಫತುಲ್ ಮಸೀಹರು ಅನೇಕ ಲೋಕನಾಯಕರಿಗೆ ಕಳುಹಿಸಿದ ಮಹತ್ವಪೂರ್ಣ ಪತ್ರಗಳನ್ನು ಈ ಪುಸ್ತಕದಲ್ಲಿ ಒಳಗೊಳಿಸಲಾಗಿದೆ. ವಿಶ್ವವ್ಯಾಪಕ ಮಹಾವಿನಾಶವನ್ನು ತಪ್ಪಿಸಲು ಇರುವ ಏಕೈಕ ಮಾರ್ಗ ದೇಶಗಳ ಪರಸ್ಪರ ಸಂಬಂಧಗಳಲ್ಲಿ ನ್ಯಾಯವನ್ನು ಪಾಲಿಸುವುದಾಗಿದೆ ಎಂದು ಅವರು ಪದೇ ಪದೇ ನೆನಪಿಸಿಕೊಟ್ಟರು. ಎರಡು ದೇಶಗಳ ಮಧ್ಯೆ ಹಗೆತನವಿದ್ದರೂ ನ್ಯಾಯಬದ್ಧವಾಗಿಯೇ ಪರಸ್ಪರ ವ್ಯವಹಾರ ನಡೆಸಬೇಕಾಗಿದೆ. ಏಕೆಂದರೆ ದ್ವೇಷಾಸೂಯೆಗಳ ಎಲ್ಲ ಕುರುಹುಗಳನ್ನು ಸಂಪೂರ್ಣವಾಗಿ ನಿವಾರಿಸಲಿಕ್ಕೆ ಇರುವ ಏಕೈಕ ಮಾರ್ಗ ಇದಾಗಿದೆ ಎಂದು ಚರಿತ್ರೆ ನಮಗೆ ಕಲಿಸಿಕೊಟ್ಟಿದೆ.

**email id:** noorulislamqdn@gmail.com

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಬಗ್ಗೆ ಸಂಕ್ಷಿಪ್ತ ಅವಲೋಕನ

ಅಹ್ಮದಿಯಾ ಮುಸ್ಲಿಮ್ ಜಮಾಅತ್ 1889ರಲ್ಲಿ ಸ್ಥಾಪಿಸಲ್ಪಟ್ಟ ಸಕ್ರಿಯ, ಅತಿವೇಗದಲ್ಲಿ ಬೆಳೆಯುತ್ತಿರುವ ಅಂತರಾಷ್ಟ್ರೀಯ ಸಜೀವ ಸಂಘಟನೆಯಾಗಿದೆ. ಕೋಟಿಗಟ್ಟಲೆ ಸದಸ್ಯತ್ವವನ್ನು ಹೊಂದಿರುವ ಈ ಸಂಘಟನೆ 210 ದೇಶಗಳಲ್ಲಿ ವ್ಯಾಪಿಸಿದೆ. ಇದರ ಈಗಿನ ಪ್ರಧಾನ ಕಾರ್ಯಾಲಯ ಯುನೈಟಡ್ ಕಿಂಗ್‌ಡಮ್‌ನಲ್ಲಿದೆ.

ದೀರ್ಘಕಾಲದಿಂದ ಕಾಯಲ್ಪಡುತ್ತಿರುವ ಮಸೀಹ್ ಆಗಮಿಸಿರುವವರು ಎಂದೂ ಆಗಮಿಸಿದ ಮಸೀಹ್ ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್(ಅ) ಆಗಿರುವರು (1835 – 1908) ಎಂದೂ ನಂಬುವ ಏಕಮಾತ್ರ ಮುಸ್ಲಿಮ್ ಸಂಘಟನೆ ಅಹ್ಮದಿಯಾ ಮುಸ್ಲಿಮ್ ಜಮಾಅತಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಭವಿಷ್ಯ ನುಡಿದ ವಾಗ್ದತ್ತ ಮಹ್‌ದೀ ಮತ್ತು ಮಸೀಹ್ ತಾನಾಗಿರುವನೆಂದು ಹಝ್ರತ್ ಅಹ್ಮದ್(ಅ) ವಾದಿಸಿದರು. ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಲು, ರಕ್ತಪಾತವನ್ನು ತಡೆಯಲು, ಧಾರ್ಮಿಕತೆ, ನ್ಯಾಯ ಮತ್ತು ಶಾಂತಿಯನ್ನು ಪುನಃಸ್ಥಾಪಿಸಲು ದೇವನು ಈಸಾ ಮಸೀಹರ(ಅ) ಹಾಗೆ ಹಝ್ರತ್ ಅಹ್ಮದರರನ್ನು(ಅ) ಕಳುಹಿಸಿದ್ದಾನೆ ಎಂದು ಅಹ್ಮದಿಯಾ ಮುಸ್ಲಿಮ್ ಸಂಘಟನೆ ನಂಬುತ್ತದೆ. ಹಝ್ರತ್ ಅಹ್ಮದರ(ಅ) ಆಗಮನದಿಂದ ಇಸ್ಲಾಮಿನ ಪುನಶ್ಚೇತನದ ಅಭೂತಪೂರ್ವ ಕಾಲಘಟ್ಟ ಆರಂಭವಾಗಿದೆ. ಅವರು ಇಸ್ಲಾಮಿನ ನೈಜ ಮತ್ತು ಸಾರವತ್ತಾದ ಅಧ್ಯಾಪನೆಗಳನ್ನು ಶಕ್ತಿಶಾಲಿಯಾಗಿ ಸಮರ್ಥಿಸಿ ಇಸ್ಲಾಮನ್ನು ಅಸಹಿಷ್ಣುತೆಯಿಂದ ಕೂಡಿದ ವಿಶ್ವಾಸ ಮತ್ತು ಆಚಾರಗಳಿಂದ ವಿಮುಕ್ತಗೊಳಿಸಿದರು. ಶ್ರೇಷ್ಠ ಧಾರ್ಮಿಕ ಸ್ಥಾಪಕರೂ ಪುಣ್ಯಾತ್ಮರೂ ಆದ ಝುರತುಷ್ಟ್ರ(ಅ), ಅಬ್ರಹಾಂ(ಅ), ಮೋಶೆ(ಅ), ಯೇಸುಕ್ರಿಸ್ತ(ಅ), ಶ್ರೀಕೃಷ್ಣ(ಅ), ಶ್ರೀಬುದ್ಧ(ಅ), ಕಂಫ್ಯೂಶಿಯಸ್(ಅ), ಲಾ ವೊಟ್ಸು, ಗುರುನಾನಕ್(ರಹ್) ಮುಂತಾದವರ ಉದಾತ್ತ ಪಾಠಗಳನ್ನು ಅವರು ನಮಗೆ ಪರಿಚಯಿಸಿಕೊಟ್ಟರು ಮತ್ತು ಆ ಅಧ್ಯಾಪನೆಗಳು ಇಸ್ಲಾಮಿನ ನೈಜ ತತ್ವಗಳೊಂದಿಗೆ ಹೇಗೆ ಸರಿಹೊಂದುತ್ತವೆ ಎಂದು ವಿವರಿಸಿಕೊಟ್ಟರು.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಎಲ್ಲ ವಿಧದ ಭಯೋತ್ಪಾದಕ ಕೃತ್ಯಗಳನ್ನು ಶಕ್ತವಾಗಿ ಖಂಡಿಸುವ ಪ್ರಮುಖ ಇಸ್ಲಾಮಿಕ ಸಂಘಟನೆಯಾಗಿದೆ. ವೈಯಕ್ತಿಕ, ಸಾಮಾಜಿಕ, ಆರ್ಥಿಕ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳಲ್ಲಿ ಶಾಂತಿ ಮತ್ತು ಸಹಿಷ್ಣುತೆಯನ್ನು ಅತ್ಯುತ್ತಮ ರೀತಿಯಲ್ಲಿ ನೆಲೆಗೊಳಿಸಲು ಈ ಸಂಘಟನೆ ಪ್ರಯತ್ನಿಸುತ್ತದೆ. ಧರ್ಮಗಳ ನಡುವೆ ಶಾಂತಿ ಸ್ಥಾಪಿಸಲು ಸಹ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಕಠಿಣ ಪ್ರಯತ್ನ ಮಾಡುತ್ತದೆ.

ಇಂದಿನ ಕಾಲದಲ್ಲಿ ನಡೆಯುತ್ತಿರುವ ಯುದ್ಧಗಳು ಇಸ್ಲಾಮಿಗೋಸ್ಕರವಾಗಲಿ, ಧರ್ಮ ರಕ್ಷಣೆಗೋಸ್ಕರವಾಗಲಿ ನಡೆಯುತ್ತಿರುವ ಯುದ್ಧಗಳಲ್ಲ. ಅವು ಆರ್ಥಿಕ ಅಥವಾ ಭೌಗೋಳಿಕ ಲಾಭಕ್ಕೋಸ್ಕರ ಮಾಡಲಾಗುವ ಯುದ್ಧಗಳಾಗಿದ್ದು ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿಯನ್ನುಂಟು ಮಾಡುವವುಗಳಾಗಿವೆ.

© Islam International Publications Ltd.
Published in India in 2018 By Nazarat Nashr-o-Isha'at, Qadian,
Sadr Anjuman Ahmadiyya Qadian. 143516-Punjab, India
Printed in India @ Fazl-e-Umar Printing Press Qadian.
**Copies:** 1000

For further information Please Visit:

www.alislam.org | www.ahmadiyyamuslimjamaat.in | www.mta.tv

Feedback : www.ahmadiyyamuslimjamaat.in/feedback

**Noor-ul-Islam Toll Free Number 1800-3010-2131** (9:30am to 10:30pm)

/islaminind /islaminind /+islaminindia /islaminindia /c/ islaminindia

**official blog: www.lightofislam.in**

**Muslim Television Ahmadiyya International**

**(www.mta.tv)**

Satellite: Asia sat 7s, Degree:105.5 East, Frequency 3760H Symbol Rate: 26000 EFC:7/8

C.Band 4 feet Dish Antenna+Receiver-DVB-S,

EutelsatE70B, Degree:70°East, Frequency:11211, Symbol Rate:5111,

Polarization-HorizontalQPSK-1/2, Data Rate; 4.71mb KU Band 2 feet Dish

Antenna+Receiver-DVB-S2